III

Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**
ವಿಶೇಷ ಸಂಚಿಕೆ

भाग–IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं–1 | नई दिल्ली सोमवार, आगष्ट 5, 1985 | श्रावण 14, 1907 (शक) | खन्ड–3 |
| No. 1 | New Delhi Monday, August 5, 1985 | Shravana 14, 1907 (Saka) | Vol. 3 |
| ಸಂಖ್ಯೆ ೧ | ನವದೆಹಲಿ ಸೋಮವಾರ, ಆಗಸ್ಟ್ ೫, ೧೯೮೫ | ಶ್ರಾವಣ ೧೪, ೧೯೦೭ (ಶಕ) | ಸಂಪುಟ ೩ |

## MINISTRY OF LAW, AND JUSTICE
(Legislative Department)

New Delhi, May 22, 1985/ Jaistha 1907 (Sakha)

The translations in Kannada of the following namely—(1) The Fatal Accidents Act, 1855 (2) The Converts Marriage Dissolution Act, 1866 (3) The Indian Easement Act, 1882 (4) The Agriculturists' Loans Act, 1884 (5) The Indian Reserve Forces Act, 1888 (6) The Prevention of Seditious Meetings Act, 1911 (7) The Hindu Disposition of property Act, 1916 (8) The Mica Mines Labour Welfare Fund Act, 1946 (9) The Delivery of Books and Newspapers (Public Libraries) Act, 1954 (10) The Meternity Benefit Act, 1961 (11) The Motor Transports Workers Act, 1961 (12) The Public Provident Fund Act, 1968 and (13) The Authorised Translations (Central Laws) Act, 1973–are hereby published under the authority of the president and shall be deemed to be the authorised translations thereof in Kannada under clause (a) of Section 2 of the authorised Translations (central laws) Act, 1973 (50 of 1973).

ಕೆಳಕಂಡ ಕೇಂದ್ರ ಅಧಿನಿಯಮಗಳ ಎಂದರೆ, (೧) ಪ್ರಾಣಾಂತಿಕ ದುರ್ಘಟನಾ ಅಧಿನಿಯಮ, ೧೮೫೫ ; (೨) ಮತಾಂತರಿತರ ವಿವಾಹ ವಿಘಟನಾ ಅಧಿನಿಯಮ, ೧೮೬೬ ; (೩) ಭಾರತ ಅನುಭೋಗ ಅಧಿನಿಯಮ, ೧೮೮೨ ; (೪) ಬೇಸಾಯಗಾರ ಸಾಲ ಅಧಿನಿಯಮ ೧೮೮೪ ; (೫) ಭಾರತೀಯ ಮೀಸಲು ದಳ ಅಧಿನಿಯಮ, ೧೮೮೮ ; (೬) ರಾಜದ್ರೋಹಾತ್ಮಕ ಸಭಾ ಪ್ರತಿಬಂಧಕ ಅಧಿನಿಯಮ, ೧೯೧೧ ; (೭) ಹಿಂದೂ ಸ್ವತ್ತಿನ ವಿಲೆ ಅಧಿನಿಯಮ, ೧೯೧೬ ; (೮) ಅಭ್ರಕ ಗಣಿಗಳ ಕಾರ್ಮಿಕರ ಕಲ್ಯಾಣ ನಿಧಿ ಅಧಿನಿಯಮ, ೧೯೪೬ ; (೯) ಪುಸ್ತಕ ಮತ್ತು ವೃತ್ತಪತ್ರಿಕೆ (ಸಾರ್ವಜನಿಕ ಗ್ರಂಥಾಲಯಗಳಿಗೆ) ಒಪ್ಪಿಸುವ ಅಧಿನಿಯಮ, ೧೯೫೪ ; (೧೦) ಪ್ರಸೂತಿ ಸೌಕರ್ಯ ಅಧಿನಿಯಮ, ೧೯೬೧ ; (೧೧) ಮೋಟಾರು ಸಾರಿಗೆ ಕೆಲಸಗಾರರ ಅಧಿನಿಯಮ, ೧೯೬೧; (೧೨) ಸಾರ್ವಜನಿಕ ಭವಿಷ್ಯ ನಿಧಿ ಅಧಿನಿಯಮ, ೧೯೬೮; ಮತ್ತು (೧೩) (ಕೇಂದ್ರ ಕಾನೂನು) ಅಧಿಕೃತ ಭಾಷಾಂತರ ಅಧಿನಿಯಮ, ೧೯೭೩.—ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ (ಕೇಂದ್ರ ಕಾನೂನುಗಳ) ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

10 + 13 = 23

# ಮೋಟಾರು ಸಾರಿಗೆ ಕೆಲಸಗಾರರ ಅಧಿನಿಯಮ, 1961

(1961ರ 27) [20ನೇ ಮೇ, 1961]

(ಏಪ್ರಿಲ್ 1, 1985 ರಂದು ಜಾರಿಯಲ್ಲಿದ್ದಂತೆ)

ಮೋಟಾರು ಸಾರಿಗೆ ಕೆಲಸಗಾರರ ಕಲ್ಯಾಣಕ್ಕಾಗಿ ಉಪಬಂಧ ಕಲ್ಪಿಸುವ ಮತ್ತು ಅವರ ಕೆಲಸದ ಸ್ಥಿತಿಗತಿಗಳನ್ನು ವಿನಿಯಮಿಸುವ ಅಧಿನಿಯಮ,

ಇದು ಭಾರತ ಗಣರಾಜ್ಯದ ಹನ್ನೆರಡನೇ ವರ್ಷದಲ್ಲಿ ಸಂಸತ್ತಿನಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕದು.—

## ಅಧ್ಯಾಯ—I

## ಪ್ರಾರಂಭಿಕ

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ, ಪ್ರಾರಂಭ ಮತ್ತು ಅನ್ವಯ.— 1) ಈ ಅಧಿನಿಯಮವನ್ನು ಮೋಟಾರು ಸಾರಿಗೆ ಕೆಲಸಗಾರರ ಅಧಿನಿಯಮ, 1961 ಎಂದು ಕರೆಯತಕ್ಕದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, 1962ರ ಮಾರ್ಚ್ 31ನೇಯ ದಿನಾಂಕದ ಅನಂತರದಲ್ಲಲ್ಲದೆ, ಆದರೆ ಕೇಂದ್ರ ಸರ್ಕಾರವು ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದು ಮತ್ತು ಬೇರೆ ಬೇರೆ ರಾಜ್ಯಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು:

ಪರಂತು, ಇದು ಕೇಂದ್ರ ಕಾರ್ಮಿಕ ಕಾನೂನುಗಳ (ಜಮ್ಮು ಮತ್ತು ಕಾಶ್ಮೀರಕ್ಕೆ ವಿಸ್ತರಣೆ) ಅಧಿನಿಯಮ, 1970ರ ಪ್ರಾರಂಭದಂದು ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ, ಜಾರಿಗೆ ಬರತಕ್ಕದು.

(4) ಇದು, ಐದು ಅಥವಾ ಹೆಚ್ಚು ಮೋಟಾರು ಸಾರಿಗೆ ಕೆಲಸಗಾರರನ್ನು ನಿಯೋಜಿಸಿಕೊಂಡಿರುವ ಪ್ರತಿಯೊಂದು ಮೋಟಾರು ಸಾರಿಗೆ ಉದ್ಯಮಕ್ಕೂ ಅನ್ವಯಿಸುತ್ತದೆ:

ಪರಂತು, ರಾಜ್ಯ ಸರ್ಕಾರವು ಹಾಗೆ ಮಾಡುವ ತನ್ನ ಉದ್ದೇಶದ ಬಗ್ಗೆ ಎರಡು ತಿಂಗಳಿಗೆ ಕಡಿಮೆ ಇಲ್ಲದ ನೋಟೀಸನ್ನು ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ ಕೊಟ್ಟ ಅನಂತರ, ಐದಕ್ಕಿಂತ ಕಡಮೆ ಮೋಟಾರು ಸಾರಿಗೆ ಕೆಲಸಗಾರರನ್ನು ನಿಯೋಜಿಸಿಕೊಂಡಿರುವ ಯಾವುದೇ ಮೋಟಾರು ಸಾರಿಗೆ ಉದ್ಯಮಕ್ಕೆ ಈ ಅಧಿನಿಯಮದ ಎಲ್ಲ ಅಥವಾ ಯಾವುವೇ ಉಪಬಂಧಗಳನ್ನು ಅನ್ವಯಿಸಬಹುದು.

2. ಪರಿಭಾಷೆಗಳು.—ಈ ಅಧಿನಿಯಮದಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,—

(ಕ) "ತರುಣ" ಎಂದರೆ, ಹದಿನೈದು ವರ್ಷ ತುಂಬಿರುವ ಆದರೆ ಹದಿನೆಂಟು ವರ್ಷ ತುಂಬಿರದ ವ್ಯಕ್ತಿ ;

(ಖ) "ವಯಸ್ಕ" ಎಂದರೆ, ಹದಿನೆಂಟು ವರ್ಷ ತುಂಬಿರುವ ವ್ಯಕ್ತಿ ;

(ಗ) "ಮಗು" ಎಂದರೆ, ಹದಿನೈದು ವರ್ಷ ತುಂಬದಿರುವ ವ್ಯಕ್ತಿ ;

(ಘ) "ದಿನ" ಎಂದರೆ, ಮಧ್ಯರಾತ್ರಿಯಿಂದ ಪ್ರಾರಂಭವಾಗುವ ಇಪ್ಪತ್ತನಾಲ್ಕು ಗಂಟೆಗಳ ಅವಧಿ :

ಪರಂತು, ಮೋಟಾರು ಸಾರಿಗೆ ಕೆಲಸಗಾರನ ಕರ್ತವ್ಯವು ಮಧ್ಯರಾತ್ರಿಗಿಂತ ಮುಂಚಿತವಾಗಿ ಪ್ರಾರಂಭವಾಗಿ, ಮಧ್ಯರಾತ್ರಿಯನ್ನು ಮೀರಿ ಮುಂದುವರಿಯುವಲ್ಲಿ, ಅಂಥ ಕರ್ತವ್ಯವು ಕೊನೆಗೊಂಡಾಗ ಪ್ರಾರಂಭವಾಗುವ ಇಪ್ಪತ್ತನಾಲ್ಕು ಗಂಟೆಗಳ ಅವಧಿಯನ್ನು ಅವನಿಗೆ ಸಂಬಂಧಿಸಿದಂತೆ ಮುಂದಿನ ದಿನವೆಂದು ಭಾವಿಸತಕ್ಕದು, ಮತ್ತು ಮಧ್ಯರಾತ್ರಿಯ ಅನಂತರ ಅವನು ಕೆಲಸ ಮಾಡಿದ ವೇಳೆಯನ್ನು ಹಿಂದಿನ ದಿನದ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದು ;

(ಙ) ಯಾವುದೇ ಮೋಟಾರು ಸಾರಿಗೆ ಉದ್ಯಮಕ್ಕೆ ಸಂಬಂಧಿಸಿದಂತೆ "ನಿಯೋಜಕ" ಎಂದರೆ, ಮೋಟಾರು ಸಾರಿಗೆ ಉದ್ಯಮದ ವ್ಯವಹಾರಗಳ ಮೇಲೆ ಅಂತಿಮ ನಿಯಂತ್ರಣವನ್ನು ಹೊಂದಿರುವಂಥ ಯಾವನೇ ವ್ಯಕ್ತಿ ಅಥವಾ ಪ್ರಾಧಿಕಾರ, ಮತ್ತು ಮೇಲಿನ ವ್ಯವಹಾರಗಳನ್ನು ವ್ಯವಸ್ಥಾಪಕನೆಂದು, ವ್ಯವಸ್ಥಾಪಕ ನಿರ್ದೇಶಕನೆಂದು, ವ್ಯವಸ್ಥಾಪಕ ಏಜೆಂಟನೆಂದು ಅಥವಾ ಇತರ ಯಾವುದೇ ಹೆಸರಿನಿಂದ ಕರೆಯಲಾಗುವ ಇತರ ಯಾವನೇ ವ್ಯಕ್ತಿಗೆ ವಹಿಸಿ ಕೊಟ್ಟಿರುವಲ್ಲಿ, ಅಂಥ ಇತರ ವ್ಯಕ್ತಿ ;

(ಚ) "ಕೆಲಸದ ವೇಳೆ" ಎಂದರೆ, ಮೋಟಾರು ಸಾರಿಗೆ ಕೆಲಸಗಾರನು ನಿಯೋಜಕನ ಅಥವಾ ಅವನ ಸೇವೆಯನ್ನು ಕ್ಲೇಮು ಮಾಡಲು ಹಕ್ಕುಳ್ಳ ಇತರ ಯಾವನೇ ವ್ಯಕ್ತಿಯ ಹತೋಟಿಯಲ್ಲಿ ಇರುವ ಸಮಯದ ಅವಧಿ ಮತ್ತು ಇದು—

(i) ಸಾರಿಗೆ ವಾಹನದ ಓಡಾಟದ ಅವಧಿಯಲ್ಲಿ ಮಾಡಿದ ಕೆಲಸಕ್ಕಾಗಿ ಕಳೆದ ಕಾಲವನ್ನು ;

(ii) ಪೂರಕ ಕೆಲಸದಲ್ಲಿ ಕಳೆದ ಕಾಲವನ್ನು, ಮತ್ತು

(iii) ಮಾರ್ಗಾಂತಗಳಲ್ಲಿ ಹದಿನೈದು ನಿಮಿಷಗಳಿಗೂ ಕಡಮೆಯ ಕೇವಲ ಹಾಜರಾತಿಯ ಅವಧಿಗಳನ್ನು ;

—ಒಳಗೊಳ್ಳುತ್ತದೆ.

ವಿವರಣೆ.—ಈ ಖಂಡದ ಉದ್ದೇಶಗಳಿಗಾಗಿ,–

(1) ಕೆಲಸದ ದಿವಸದ ಸಂಬಂಧದಲ್ಲಿ "ಓಡಾಟದ ಅವಧಿ" ಎಂದರೆ, ಕೆಲಸದ ದಿವಸದ ಪ್ರಾರಂಭದಲ್ಲಿ ಸಾರಿಗೆ ವಾಹನವು ಕೆಲಸ ಮಾಡಲು ಪ್ರಾರಂಭಿಸಿದಾಗಿನಿಂದ ಕೆಲಸದ ದಿವಸದ ಕೊನೆಯಲ್ಲಿ ಸಾರಿಗೆ ವಾಹನವು ಕೆಲಸ ಮಾಡುವುದನ್ನು ನಿಲ್ಲಿಸಿದವರೆಗಿನ ಅವಧಿ; ಇದು ಯಾವ ಅವಧಿಯಲ್ಲಿ ವಾಹನ ನಡೆಸುವ, ಅಥವಾ ಸಾರಿಗೆ ವಾಹನಕ್ಕೆ ಸಂಬಂಧಿಸಿ ಇತರ ಯಾವುದೇ ಕೆಲಸವನ್ನು ಮಾಡುವ ವ್ಯಕ್ತಿಗಳು ಅವರಿಗೆ ಇಷ್ಟಬಂದಂತೆ ತಮ್ಮ ಸಮಯವನ್ನು ಕಳೆಯಲು ಅಥವಾ ಪೂರಕ ಕೆಲಸದಲ್ಲಿ ತೊಡಗಿರಲು ಸ್ವತಂತ್ರರಾಗಿರುವರೋ ಅಂಥ ನಿಯಮಿಸಬಹುದಾದ ಅವಧಿಯನ್ನು ಮೀರಿದ ಅವಧಿಯಲ್ಲಿ ಸಾರಿಗೆ ವಾಹನದ ಓಡಾಟಕ್ಕೆ ಅಡ್ಡಿಯಿಂಟು ಮಾಡುವ ಯಾವುದೇ ಸಮಯವನ್ನು ಒಳಗೊಳ್ಳುವುದಿಲ್ಲ ;

(2) ''ಪೂರಕ ಕೆಲಸ'' ಎಂದರೆ, ವಿಶೇಷವಾಗಿ,—

(i) ಲೆಕ್ಕಪತ್ರಗಳಿಗೆ, ನಗದನ್ನು ಸಂದಾಯ ಮಾಡುವುದಕ್ಕೆ ರಿಜಿಸ್ಟರುಗಳಿಗೆ ಸಹಿ ಮಾಡುವುದಕ್ಕೆ, ಓಡಾಟಪಟ್ಟಿಗಳನ್ನು ಒಪ್ಪಿಸುವುದಕ್ಕೆ, ಟಿಕೆಟ್ಟುಗಳನ್ನು ಪರೀಕ್ಷಿಸುವುದಕ್ಕೆ ಸಂಬಂಧಿಸಿದ ಕೆಲಸವನ್ನು ಮತ್ತು ಅಂಥದೇ ಇತರ ಕೆಲಸವನ್ನು ;

(ii) ಸಾರಿಗೆ ವಾಹನವನ್ನು ವಶಕ್ಕೆ ತೆಗೆದುಕೊಳ್ಳುವುದನ್ನು ಮತ್ತು ಅದನ್ನು ಗ್ಯಾರೇಜಿಗೆ ಬಿಡುವುದನ್ನು ;

(iii) ಒಬ್ಬ ವ್ಯಕ್ತಿಯು ಸಹಿ ಮಾಡಿ ಕೆಲಸಕ್ಕೆ ಹಾಜರಾದ ಸ್ಥಳದಿಂದ, ಆ ಸಾರಿಗೆ ವಾಹನವನ್ನು ಅವನು ವಶಕ್ಕೆ ತೆಗೆದುಕೊಳ್ಳುವ ಸ್ಥಳಕ್ಕೆ ಮತ್ತು ಅವನು ಆ ಸಾರಿಗೆ ವಾಹನವನ್ನು ಬಿಡುವ ಸ್ಥಳದಿಂದ ಅವನು ಸಹಿ ಮಾಡಿ ಕೆಲಸವನ್ನು ಮುಕ್ತಾಯಗೊಳಿಸುವ ಸ್ಥಳಕ್ಕೆ ಪ್ರಯಾಣ ಮಾಡುವುದನ್ನು;

(iv) ಸಾರಿಗೆ ವಾಹನವನ್ನು ಸುವ್ಯವಸ್ಥೆಯಲ್ಲಿಡುವುದಕ್ಕೆ ಮತ್ತು ದುರಸ್ತಿಗೊಳಿಸುವುದಕ್ಕೆ ಸಂಬಂಧಿಸಿದ ಕೆಲಸವನ್ನು ; ಮತ್ತು

(v) ಸಾರಿಗೆ ವಾಹನಕ್ಕೆ ಸರಕು ಭರ್ತಿ ಮಾಡುವುದನ್ನು ಮತ್ತು ಇಳಿಸುವುದನ್ನು ;

ಒಳಗೊಂಡು, ಸಾರಿಗೆ ವಾಹನಕ್ಕೆ, ಅದರ ಪ್ರಯಾಣಿಕರಿಗೆ ಅಥವಾ ಅದರ ಹೊರೆಗೆ ಸಂಬಂಧಿಸಿ, ಸಾರಿಗೆ ವಾಹನದ ಓಡಾಟದ ಕಾಲವನ್ನು ಬಿಟ್ಟು ಬೇರೆ ಕಾಲದಲ್ಲಿ, ಮಾಡಿದ ಕೆಲಸ.

(3) "ಕೇವಲ ಹಾಜರಾತಿಯ ಅವಧಿ'' ಎಂದರೆ, ಬರಬಹುದಾದ ಕರೆಗಳಿಗೆ ಉತ್ತರಿಸುವುದಕ್ಕಾಗಿ ಅಥವಾ ಕರ್ತವ್ಯ ಸೂಚಿಯಲ್ಲಿ ನಿಗದಿ ಪಡಿಸಲಾದ ಕಾಲದಲ್ಲಿ ಕೆಲಸವನ್ನು ಪುನರಾರಂಭಿಸುವುದಕ್ಕಾಗಿ ಮಾತ್ರವೇ ಒಬ್ಬ ವ್ಯಕ್ತಿಯು ತನ್ನ ಹುದ್ದೆಯಲ್ಲಿ ಉಳಿಯುವ ಅವಧಿ ;

(ಛ) "ಮೋಟಾರು ಸಾರಿಗೆ ಉದ್ಯಮ'' ಎಂದರೆ, ಬಾಡಿಗೆಗಾಗಿ ಅಥವಾ ಪ್ರತಿಫಲಕ್ಕಾಗಿ ರಸ್ತೆಯ ಮೂಲಕ ಪ್ರಯಾಣಿಕರನ್ನು ಅಥವಾ ಸರಕುಗಳನ್ನು ಅಥವಾ ಇವೆರಡನ್ನೂ ಸಾಗಿಸುವುದರಲ್ಲಿ ತೊಡಗಿರುವ ಮೋಟಾರು ಸಾರಿಗೆ ಉದ್ಯಮ, ಮತ್ತು ಇದು ಖಾಸಗಿ ವಾಹನ ವನ್ನೂ ಒಳಗೊಳ್ಳುತ್ತದೆ ;

(ಜ) "ಮೋಟಾರು ಸಾರಿಗೆ ಕೆಲಸಗಾರ'' ಎಂದರೆ, ವೃತ್ತಿಯ ನಾತೆಯಿಂದ, ಮಜೂರಿಯ ಮೇಲೆ ಅಥವಾ ಮಜೂರಿ ಇಲ್ಲದೆ, ಸಾರಿಗೆ ವಾಹನದಲ್ಲಿ ಕೆಲಸ ಮಾಡಲು ಅಥವಾ ಅಂಥ ಸಾರಿಗೆ ವಾಹನವು ಬರುವುದಕ್ಕೆ, ಹೊರಡುವುದಕ್ಕೆ, ಅದಕ್ಕೆ ಸರಕುಗಳನ್ನು ಭರ್ತಿ ಮಾಡುವುದಕ್ಕೆ ಅಥವಾ ಇಳಿಸುವುದಕ್ಕೆ ಸಂಬಂಧಿಸಿದ ಕರ್ತವ್ಯಗಳನ್ನು ನಿರ್ವಹಿಸಲು ಮೋಟಾರು ಸಾರಿಗೆ ಉದ್ಯಮದಲ್ಲಿ ನೇರವಾಗಿ ಅಥವಾ ಏಜೆನ್ಸಿಯ ಮೂಲಕವಾಗಿ ನಿಯೋಜಿತನಾದ ವ್ಯಕ್ತಿ, ಮತ್ತು ಇದು ಚಾಲಕನನ್ನು, ನಿರ್ವಾಹಕನನ್ನು, ಕ್ಲೀನರ್‌ನನ್ನು, ನಿಲ್ದಾಣ ಸಿಬ್ಬಂದಿಯನ್ನು, ಮಾರ್ಗ ಪರೀಕ್ಷಕ ಸಿಬ್ಬಂದಿಯನ್ನು, ಟಿಕೆಟ್ ಗುಮಾಸ್ತನನ್ನು, ನಗದಿ ಗುಮಾಸ್ತನನ್ನು, ಡಿಪ್ಪೋ ಗುಮಾಸ್ತನನ್ನು ಸಮಯ ಪಾಲಕನನ್ನು, ಕಾವಲುಗಾರನನ್ನು, ಅಥವಾ ಪರಿಚಾರಕನನ್ನು ಒಳಗೊಳ್ಳುತ್ತದೆ, ಆದರೆ 8ನೇ ಪ್ರಕರಣದಲ್ಲಿ ಹೊರತು,—

(i) ಕಾರ್ಖಾನೆಗಳ ಅಧಿನಿಯಮ, 1948 (1948ರ 63)ರಲ್ಲಿ ಪರಿಭಾಷಿತವಾದಂತೆ ಕಾರ್ಖಾನೆಯಲ್ಲಿ ನಿಯೋಜಿತನಾದಂಥ ಯಾವನೇ ವ್ಯಕ್ತಿಯನ್ನು ;

(ii) ಅಂಗಡಿಗಳಲ್ಲಿ ಅಥವಾ ವಾಣಿಜ್ಯ ಸಂಸ್ಥೆಗಳಲ್ಲಿ ನಿಯೋಜಿತರಾದ ವ್ಯಕ್ತಿಗಳ ಸೇವಾ ಷರತ್ತುಗಳನ್ನು ವಿನಿಯಮನಗೊಳಿಸಲು ತತ್ಕಾಲ ದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳು ಅನ್ವಯಿಸುವಂಥ ಯಾವನೇ ವ್ಯಕ್ತಿಯನ್ನು ;

—ಒಳಗೊಳ್ಳುವುದಿಲ್ಲ.

(ಝ) "ನಿಯಮಿಸಲಾದುದು'' ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು ;

(ಞ) "ಅರ್ಹ ವೈದ್ಯ ವೃತ್ತಿಗ'' ಎಂದರೆ, ಭಾರತೀಯ ವೈದ್ಯಕೀಯ ಪದವಿಗಳ ಅಧಿನಿಯಮ, 1916 (1916ರ 7)ರ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ, ಅಥವಾ ಆ ಅಧಿನಿಯಮದ 3ನೇ ಪ್ರಕರಣದ ಮೇರೆಗೆ ಅಧಿಸೂಚಿಸಿದ ಅಥವಾ ಭಾರತೀಯ ವೈದ್ಯಕೀಯ ಪರಿಷತ್ತು ಅಧಿನಿಯಮ, 1956 (1956ರ 102)ರ ಅನುಸೂಚಿಗಳಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರವು ಕೊಟ್ಟಿರುವ ಪ್ರಮಾಣ ಪತ್ರವನ್ನು ಹೊಂದಿರುವ ವ್ಯಕ್ತಿ, ಮತ್ತು ಯಾವುದೇ ಪ್ರಾಂತೀಯ ಅಥವಾ ರಾಜ್ಯ ವೈದ್ಯಕೀಯ ಪರಿಷತ್ತು ಅಧಿನಿಯಮದ ಮೇರೆಗೆ ಕೊಡಲಾದ ಪ್ರಮಾಣಪತ್ರವನ್ನು ಹೊಂದಿರುವ ಯಾವನೇ ವ್ಯಕ್ತಿಯನ್ನು ಒಳಗೊಳ್ಳುತ್ತದೆ;

(ಟ) "ಕಾಲ ವ್ಯಾಪ್ತಿ" ಎಂದರೆ, ಯಾವುದೇ ದಿನದಲ್ಲಿ ಕರ್ತವ್ಯದ ಆರಂಭದ ಮತ್ತು ಆ ದಿನದಲ್ಲಿ ಕರ್ತವ್ಯದ ಮುಕ್ತಾಯದ ನಡುವಣ ಅವಧಿ ;

(ಠ) "ಮಜೂರಿ'' ಎಂಬುದು ಮಜೂರಿ ಸಂದಾಯ ಅಧಿನಿಯಮ, 1936ರ 2ನೇ ಪ್ರಕರಣದ (vi)ನೇ ಖಂಡದಲ್ಲಿ ಅದಕ್ಕೆ ಕೊಡಲಾಗಿರುವ ಅರ್ಥವನ್ನೇ ಹೊಂದಿರುತ್ತದೆ;

(ಡ) "ವಾರ" ಎಂದರೆ, ಶನಿವಾರ ಮಧ್ಯರಾತ್ರಿಯಿಂದ ಮತ್ತು ಮುಂದಿನ ಶನಿವಾರ ಮಧ್ಯರಾತ್ರಿಯವರೆಗಿನ ಅವಧಿ ;

(ಢ) ಈ ಅಧಿನಿಯಮದಲ್ಲಿ ಉಪಯೋಗಿಸಲಾಗಿದ್ದು ಪರಿಭಾಷಿತವಾಗಿರದ ಆದರೆ ಮೋಟಾರು ವಾಹನಗಳ ಅಧಿನಿಯಮ, 1939ರಲ್ಲಿ ಪರಿಭಾಷಿತವಾಗಿರುವ ಇತರ ಎಲ್ಲ ಪದಗಳು ಮತ್ತು ಪದಾವಳಿಗಳು, ಆ ಅಧಿನಿಯಮದಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಡಲಾಗಿರುವ ಅರ್ಥಗಳನ್ನೇ ಹೊಂದಿರತಕ್ಕದು

## ಅಧ್ಯಾಯ—II

### ಮೋಟಾರು ಸಾರಿಗೆ ಉದ್ಯಮಗಳ ನೋಂದಣಿ

3. ಮೋಟಾರು ಸಾರಿಗೆ ಉದ್ಯಮದ ನೋಂದಣಿ.—(1) ಈ ಅಧಿನಿಯಮವು ಅನ್ವಯಿಸುವ ಮೋಟಾರು ಸಾರಿಗೆ ಉದ್ಯಮದ ಪ್ರತಿಯೊಬ್ಬ ನಿಯೋಜಕನು ಈ ಅಧಿನಿಯಮದ ಮೇರೆಗೆ ಉದ್ಯಮವನ್ನು ನೋಂದಣಿ ಮಾಡಿಸಿಕೊಳ್ಳತಕ್ಕದು.

(2) ಮೋಟಾರು ಸಾರಿಗೆ ಉದ್ಯಮದ ನೋಂದಣಿಗಾಗಿ, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಕಾಲದೊಳಗೆ, ನಿಯಮಿಸ ಲಾದ ಪ್ರಾಧಿಕಾರಕ್ಕೆ ನಿಯೋಜಕನು ಅರ್ಜಿಯನ್ನು ಸಲ್ಲಿಸತಕ್ಕದು.

(3) ಈ ಅಧಿನಿಯಮದ ಮೇರೆಗೆ ಮೋಟಾರು ಸಾರಿಗೆ ಉದ್ಯಮವು ನೋಂದಣಿಯಾಗಿರುವಲ್ಲಿ, ನಿಯಮಿಸಬಹುದಾದಂಥ ವಿವರಗಳನ್ನು ಗೊಂಡ ನೋಂದಣಿ ಪ್ರಮಾಣಪತ್ರವನ್ನು ನಿಯೋಜಕನಿಗೆ ಕೊಡತಕ್ಕದು.

## ಅಧ್ಯಾಯ—III

## ಪರಿಶೀಲನಾ ಸಿಬ್ಬಂದಿ

4. ಮುಖ್ಯ ಪರಿಶೀಲಕ ಮತ್ತು ಪರಿಶೀಲಕರು.—(1) ರಾಜ್ಯ ಸರ್ಕಾರವು, ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ, ಯುಕ್ತ ಅರ್ಹತೆಯನ್ನು ಹೊಂದಿದ ವ್ಯಕ್ತಿಯನ್ನು ರಾಜ್ಯಕ್ಕಾಗಿ ಮುಖ್ಯ ಪರಿಶೀಲಕನನ್ನಾಗಿ ಮತ್ತು ಯುಕ್ತ ಅರ್ಹತೆ ಹೊಂದಿದ ತಾನು ಸೂಕ್ತವೆಂದು ಆಲೋಚಿಸುವಷ್ಟು ಸಂಖ್ಯೆಯ ವ್ಯಕ್ತಿಗಳನ್ನು ಮುಖ್ಯ ಪರಿಶೀಲಕನಿಗೆ ಅಧೀನರಾಗಿರುವ ಪರಿಶೀಲಕರನ್ನಾಗಿ ನೇಮಿಸಬಹುದು.

(2) ಈ ಅಧಿನಿಯಮದ ಮೇರೆಗೆ ಪರಿಶೀಲಕರು ತಮ್ಮ ಅಧಿಕಾರಗಳನ್ನು ಯಾವ ಸ್ಥಳೀಯ ಪರಿಮಿತಿಗಳೊಳಗೆ ಚಲಾಯಿಸತಕ್ಕುದೆಂಬುದನ್ನು ಮುಖ್ಯ ಪರಿಶೀಲಕನು ಘೋಷಿಸಬಹುದು, ಮತ್ತು ರಾಜ್ಯ ಸರ್ಕಾರವು ಅವನಿಗೆ ವಹಿಸಿಕೊಡಬಹುದಾದಂಥ ಸ್ಥಳೀಯ ಪರಿಮಿತಿಗಳೊಳಗೆ ಅವನು ಪರಿಶೀಲಕನ ಅಧಿಕಾರಗಳನ್ನು ಚಲಾಯಿಸಬಹುದು.

(3) ಮುಖ್ಯ ಪರಿಶೀಲಕನನ್ನು ಮತ್ತು ಎಲ್ಲಾ ಪರಿಶೀಲಕರನ್ನು ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥದಲ್ಲಿ ಲೋಕ ನೌಕರರೆಂದು ಭಾವಿಸತಕ್ಕುದು.

5. ಪರಿಶೀಲಕರ ಅಧಿಕಾರಗಳು.—(1) ರಾಜ್ಯ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ವಿಧಿಸಬಹುದಾದಂಥ ಷರತ್ತು ಮತ್ತು ನಿರ್ಬಂಧಗಳಿಗೆ ಒಳಪಟ್ಟು, ಮುಖ್ಯ ಪರಿಶೀಲಕನು ಅಥವಾ ಪರಿಶೀಲಕನು,—

(ಕ) ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳನ್ನು ಯಾವುದೇ ಮೋಟಾರು ಸಾರಿಗೆ ಉದ್ಯಮಕ್ಕೆ ಸಂಬಂಧಿಸಿ ಅನುಸರಿಸಲಾಗುತ್ತಿದೆಯೋ ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿ, ತಾನು ಸೂಕ್ತವೆಂದು ಆಲೋಚಿಸುವಂಥ ಪರೀಕ್ಷೆಯನ್ನು ಮತ್ತು ವಿಚಾರಣೆಯನ್ನು ಮಾಡಬಹುದು, ಮತ್ತು ಈ ಉದ್ದೇಶಕ್ಕಾಗಿ ಸಾರಿಗೆ ವಾಹನವನ್ನು ನಿಲ್ಲಿಸುವಂತೆ ಸಾರಿಗೆ ವಾಹನದ ಚಾಲಕನನ್ನು ಅಗತ್ಯಪಡಿಸಬಹುದು ಮತ್ತು ಸಯುಕ್ತಿಕವಾಗಿ ಅವಶ್ಯಕವೆಂದು ಕಂಡುಬರಬಹುದಾದಷ್ಟು ಸಮಯದವರೆಗೆ ಅದನ್ನು ನಿಲ್ಲಿಸಿಕೊಂಡಿರುವಂತೆ ಮಾಡಬಹುದು ;

(ಖ) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ, ಯಾವುದೇ ಮೋಟಾರು ಸಾರಿಗೆ ಉದ್ಯಮದ ಉಪಯೋಗದಲ್ಲಿ ಅಥವಾ ಅಧಿಭೋಗದಲ್ಲಿ ಇದೆಯೆಂದು ನಂಬಲು ಕಾರಣವಿರುವ ಆ ಯಾವುದೇ ಆವರಣವನ್ನು ತಾನು ಸೂಕ್ತವೆಂದು ಆಲೋಚಿಸುವಂಥ ಸಹಾಯವೇನಾದರೂ ಇದ್ದರೆ ಅದರೊಂದಿಗೆ, ಯಾವುದೇ ಯುಕ್ತ ಕಾಲದಲ್ಲಿ ಪ್ರವೇಶಿಸಬಹುದು, ಪರಿಶೀಲಿಸಬಹುದು ಮತ್ತು ಶೋಧಿಸಬಹುದು ;

(ಗ) ಮೋಟಾರು ಸಾರಿಗೆ ಉದ್ಯಮದಲ್ಲಿ ನಿಯೋಜಿತನಾದ ಯಾವನೇ ಮೋಟಾರು ಸಾರಿಗೆ ಕೆಲಸಗಾರನನ್ನು ಪರೀಕ್ಷಿಸಬಹುದು ಅಥವಾ ಈ ಅಧಿನಿಯಮಕ್ಕೆ ಅನುಗುಣವಾಗಿ ಇಟ್ಟುಕೊಂಡುಬರಲಾದ ಯಾವುದೇ ರಿಜಿಸ್ಟರನ್ನು ಅಥವಾ ಇತರ ದಸ್ತಾವೇಜನ್ನು ಹಾಜರುಪಡಿಸುವಂತೆ ಅಗತ್ಯಪಡಿಸಬಹುದು, ಮತ್ತು ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕೆ ಆವಶ್ಯಕವೆಂದು ಅವನು ಪರ್ಯಾಲೋಚಿಸಬಹುದಾದ ಯಾವನೇ ವ್ಯಕ್ತಿಯ ಹೇಳಿಕೆಗಳನ್ನು ಸ್ಥಳದಲ್ಲಿಯೇ ಅಥವಾ ಅನ್ಯಥಾ ತೆಗೆದುಕೊಳ್ಳಬಹುದು ;

(ಘ) ನಿಯೋಜಕನಿಂದ ನಡೆದಿದೆಯೆಂದು ನಂಬಲು ಅವನಿಗೆ ಕಾರಣವಿರುವ, ಈ ಅಧಿನಿಯಮದ ಮೇರೆಗಿನ ಅಪರಾಧಕ್ಕೆ ಸಂಬಂಧಿಸಿ ಸುಸಂಬದ್ಧವೆಂದು ಅವನು ಪರ್ಯಾಲೋಚಿಸಬಹುದಾದಂಥ ರಿಜಿಸ್ಟರುಗಳನ್ನು ಅಥವಾ ದಸ್ತಾವೇಜುಗಳನ್ನು ಅಥವಾ ಅವುಗಳ ಭಾಗಗಳನ್ನು ಅಭಿಗ್ರಹಿಸಬಹುದು ಅಥವಾ ಅವುಗಳ ಪ್ರತಿಗಳನ್ನು ತೆಗೆದುಕೊಳ್ಳಬಹುದು ;

(ಙ) ನಿಯಮಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸಬಹುದು :

ಪರಂತು, ಯಾವನೇ ವ್ಯಕ್ತಿಯನ್ನು ಅಪರಾಧದಲ್ಲಿ ಸಿಕ್ಕಿಸುವಂಥ ಯಾವುದೇ ಪ್ರಶ್ನೆಗೆ ಉತ್ತರಿಸಲು ಅಥವಾ ಯಾವುದೇ ಹೇಳಿಕೆಯನ್ನು ಕೊಡಲು ಅವನನ್ನು ಈ ಉಪಪ್ರಕರಣದ ಮೇರೆಗೆ ಒತ್ತಾಯಿಸತಕ್ಕುದಲ್ಲ.

(2) ದಂಡ ಪ್ರಕ್ರಿಯಾ ಸಂಹಿತೆ, 1898ರ ಉಪಬಂಧಗಳು, ಸದರಿ ಸಂಹಿತೆಯ 98ನೇ ಪ್ರಕರಣದ ಮೇರೆಗೆ ಹೊರಡಿಸಲಾದ ವಾರೆಂಟಿನ ಪ್ರಾಧಿಕಾರದ ಮೇರೆಗೆ ಮಾಡಿದ ಯಾವುದೇ ಶೋಧನೆಗೆ ಅಥವಾ ಅಭಿಗ್ರಹಣಕ್ಕೆ ಅನ್ವಯಿಸಬಹುದಾದಷ್ಟರ ಮಟ್ಟಿಗೆ ಈ ಅಧಿನಿಯಮದ ಮೇರೆಗಿನ ಯಾವುದೇ ಶೋಧನೆಗೆ ಅಥವಾ ಅಭಿಗ್ರಹಣಕ್ಕೆ ಅನ್ವಯಿಸತಕ್ಕುದು.

6. ಪರಿಶೀಲಕರಿಗೆ ಒದಗಿಸಬೇಕಾದ ಸೌಲಭ್ಯಗಳು :—ಈ ಅಧಿನಿಯಮದ ಮೇರೆಗೆ ಯಾವುದೇ ಪ್ರವೇಶವನ್ನು, ಪರಿಶೀಲನೆಯನ್ನು, ಪರೀಕ್ಷೆಯನ್ನು ಅಥವಾ ವಿಚಾರಣೆಯನ್ನು ಮಾಡಲು ಯುಕ್ತವಾದ ಎಲ್ಲ ಸೌಲಭ್ಯಗಳನ್ನು ಪ್ರತಿಯೊಬ್ಬ ನಿಯೋಜಕನೂ ಮುಖ್ಯ ಪರಿಶೀಲಕನಿಗೆ ಮತ್ತು ಪರಿಶೀಲಕನಿಗೆ ಒದಗಿಸತಕ್ಕುದು.

7. ಪ್ರಮಾಣೀಕರಿಸುವ ಶಸ್ತ್ರವೈದ್ಯರು.—(1) ರಾಜ್ಯಸರ್ಕಾರವು, ಅರ್ಹ ವೈದ್ಯ ವೃತ್ತಿಗರನ್ನು ಅನುಕ್ರಮವಾಗಿ ಅವರಿಗೆ ವಹಿಸಿಕೊಡಬಹುದಾದಂಥ ಸ್ಥಳೀಯ ಪರಿಮಿತಿಗಳೊಳಗೆ ಅಥವಾ ಅಂಥ ಮೋಟಾರು ಸಾರಿಗೆ ಉದ್ಯಮಗಳಿಗೆ ಅಥವಾ ಅಂಥ ಮೋಟಾರು ಸಾರಿಗೆ ಉದ್ಯಮ ವರ್ಗಕ್ಕೆ, ಈ ಅಧಿನಿಯಮದ ಉದ್ದೇಶಗಳಿಗಾಗಿ, ಪ್ರಮಾಣೀಕರಿಸುವ ಶಸ್ತ್ರವೈದ್ಯರನ್ನಾಗಿ ನೇಮಿಸಬಹುದು.

(2) ಪ್ರಮಾಣೀಕರಿಸುವ ಶಸ್ತ್ರವೈದ್ಯನು,—

(ಕ) ಮೋಟಾರು ಸಾರಿಗೆ ಕೆಲಸಗಾರರನ್ನು ಪರೀಕ್ಷಿಸುವುದಕ್ಕೆ ಮತ್ತು ಅವರಿಗೆ ಪ್ರಮಾಣಪತ್ರವನ್ನು ಕೊಡುವುದಕ್ಕೆ ;

(ಖ) ಯಾವುದೇ ಮೋಟಾರು ಸಾರಿಗೆ ಉದ್ಯಮದಲ್ಲಿ ಮೋಟಾರು ಸಾರಿಗೆ ಕೆಲಸಗಾರರಾಗಿ ತರುಣರನ್ನು ಅವರ ಆರೋಗ್ಯಕ್ಕೆ ಹಾನಿಯನ್ನುಂಟು ಮಾಡುವ ಸಂಭವವಿರುವ ಯಾವುದೇ ಕೆಲಸದಲ್ಲಿ ನಿಯೋಜಿಸಲಾಗಿರುವಲ್ಲಿ ಅಥವಾ ನಿಯೋಜಿಸಬೇಕಾಗಿರುವಲ್ಲಿ, ನಿಯಮಿಸಬಹುದಾದಂಥ ವೈದ್ಯಕೀಯ ಮೇಲ್ವಿಚಾರಣೆಯನ್ನು ನಡೆಸುವುದಕ್ಕೆ ;

—ಸಂಬಂಧಿಸಿ ನಿಯಮಿಸಬಹುದಾದಂಥ ಕರ್ತವ್ಯಗಳನ್ನು ನೆರವೇರಿಸತಕ್ಕುದು.

## ಅಧ್ಯಾಯ—IV

## ಕಲ್ಯಾಣ ಮತ್ತು ಆರೋಗ್ಯ

8. ಕ್ಯಾಂಟೀನುಗಳು.—(1) ಮೋಟಾರು ಸಾರಿಗೆ ಉದ್ಯಮದಲ್ಲಿ ನಿಯೋಜಿತರಾಗಿರುವ ಒಂದು ನೂರು ಅಥವಾ ಹೆಚ್ಚು ಮೋಟಾರು ಸಾರಿಗೆ ಕೆಲಸಗಾರರು ಸಾಮಾನ್ಯವಾಗಿ ಪ್ರತಿದಿನವೂ ಕೆಲಸಕ್ಕೆ ಹಾಜರಾಗುತ್ತಿರುವ ಪ್ರತಿಯೊಂದು ಸ್ಥಳದಲ್ಲಿಯೂ ಮೋಟಾರು ಸಾರಿಗೆ ಕೆಲಸಗಾರರ ಉಪಯೋಗಕ್ಕಾಗಿ ನಿಯೋಜಕನು ಒಂದು ಅಥವಾ ಹೆಚ್ಚು ಕ್ಯಾಂಟೀನುಗಳನ್ನು ಒದಗಿಸಬೇಕೆಂದು ಮತ್ತು ನಡೆಸಿಕೊಂಡುಬರಬೇಕೆಂದು ಅಗತ್ಯಪಡಿಸುವ ನಿಯಮಗಳನ್ನು ರಾಜ್ಯ ಸರ್ಕಾರವು ರಚಿಸಬಹುದು.

(2) ಹಿಂದೆ ಹೇಳಿದ ಅಧಿಕಾರದ ಸಾಮಾನ್ಯತೆಗೆ ಬಾಧೆ ಬಾರದಂತೆ ಅಂಥ ನಿಯಮಗಳಲ್ಲಿ,—

(ಕ) ಯಾವ ದಿನಾಂಕದೊಳಗೆ ಕ್ಯಾಂಟೀನುಗಳನ್ನು ಒದಗಿಸತಕ್ಕುದು ಎಂಬ ಬಗ್ಗೆ ;

(ಖ) ಒದಗಿಸಬೇಕಾದ ಕ್ಯಾಂಟೀನುಗಳ ಸಂಖ್ಯೆಯ ಮತ್ತು ಕ್ಯಾಂಟೀನುಗಳ ನಿರ್ಮಾಣಕ್ಕೆ, ಸ್ಥಳಾವಕಾಶಕ್ಕೆ, ಪೀಠೋಪಕರಣಗಳಿಗೆ ಮತ್ತು ಇತರ ಸಲಕರಣೆಗಳಿಗೆ ಸಂಬಂಧಿಸಿದ ಗುಣಮಟ್ಟದ ಬಗ್ಗೆ ;

(ಗ) ಅವುಗಳಲ್ಲಿ ಬಡಿಸಬಹುದಾದ ಆಹಾರ ಪದಾರ್ಥಗಳ ಮತ್ತು ಅವುಗಳಿಗೆ ನಿಗದಿಪಡಿಸಬಹುದಾದ ಬೆಲೆಗಳ ಬಗ್ಗೆ ;

(ಘ) ಕ್ಯಾಂಟೀನಿನ ಬಗ್ಗೆ ವ್ಯವಸ್ಥಾಪಕ ಸಮಿತಿಯ ರಚನೆ ಮತ್ತು ಕ್ಯಾಂಟೀನಿನ ವ್ಯವಸ್ಥಾಪನೆಯಲ್ಲಿ ಮೋಟಾರು ಸಾರಿಗೆ ಕೆಲಸಗಾರರ ಪ್ರಾತಿನಿಧ್ಯದ ಬಗ್ಗೆ ;

—ಉಪಬಂಧವನ್ನು ಕಲ್ಪಿಸಬಹುದು.

(3) ರಾಜ್ಯ ಸರ್ಕಾರವು, ತಾನು ವಿಧಿಸಬಹುದಾದಂಥ ಷರತ್ತುಗಳಿಗೊಳಪಟ್ಟು, (2)ನೇ ಉಪ-ಪ್ರಕರಣದ (ಗ) ಖಂಡಕ್ಕೆ ಸಂಬಂಧಿಸಿದ ನಿಯಮ ರಚನಾಧಿಕಾರವನ್ನು ಮುಖ್ಯ ಪರಿಶೀಲಕನಿಗೆ ಪ್ರತ್ಯಾಯೋಜಿಸಬಹುದು.

9. ವಿಶ್ರಾಂತಿ ಕೋಣೆಗಳು.—(1) ಯಾವುದೇ ಮೋಟಾರು ಸಾರಿಗೆ ಉದ್ಯಮದಲ್ಲಿ ನಿಯೋಜಿತರಾಗಿರುವ ಮೋಟಾರು ಸಾರಿಗೆ ಕೆಲಸಗಾರರು ರಾತ್ರಿಕಾಲದಲ್ಲಿ ತಂಗುವುದು ಅಗತ್ಯವಾಗಿರುವಂಥ ಪ್ರತಿಯೊಂದು ಸ್ಥಳದಲ್ಲಿ, ಅಂಥ ಮೋಟಾರು ಸಾರಿಗೆ ಕೆಲಸಗಾರರ ಉಪಯೋಗಕ್ಕಾಗಿ ನಿಯಮಿಸಬಹುದಾದಷ್ಟು ಸಂಖ್ಯೆಯ ವಿಶ್ರಾಂತಿ ಕೋಣೆಗಳನ್ನು ಅಥವಾ ಸೂಕ್ತವಾದ ಇತರ ಬದಲಿ ಸ್ಥಳಾವಕಾಶವನ್ನು ನಿಯೋಜಕನು ಒದಗಿಸತಕ್ಕುದು ಮತ್ತು ನಿರ್ವಹಿಸತಕ್ಕುದು.

(2) (1)ನೇ ಉಪ-ಪ್ರಕರಣದ ಮೇರೆಗೆ ಒದಗಿಸಬೇಕಾದ ವಿಶ್ರಾಂತಿ ಕೋಣೆಗಳಿಗೆ ಅಥವಾ ಬದಲಿ ಸ್ಥಳಾವಕಾಶಕ್ಕೆ ಸಾಕಷ್ಟು ಬೆಳಕು ಮತ್ತು ಗಾಳಿಯ ವ್ಯವಸ್ಥೆಯನ್ನು ಮಾಡತಕ್ಕುದು ಮತ್ತು ಅವುಗಳು ಚೊಕ್ಕಟವಾದ ಮತ್ತು ಸುಖಕರವಾದ ರೀತಿಯಲ್ಲಿ ಇರುವಂತೆ ನೋಡಿಕೊಳ್ಳತಕ್ಕುದು.

(3) ಈ ಪ್ರಕರಣದ ಮೇರೆಗೆ ಒದಗಿಸಬೇಕಾದ ವಿಶ್ರಾಂತಿ ಕೋಣೆಗಳ ನಿರ್ಮಾಣಕ್ಕೆ, ಸ್ಥಳಾವಕಾಶಕ್ಕೆ, ಪೀಠೋಪಕರಣಗಳಿಗೆ ಮತ್ತು ಇತರ ಸಲಕರಣೆಗಳಿಗೆ ಸಂಬಂಧಿಸಿದ ಅಥವಾ ಬದಲೀ ಸ್ಥಳಾವಕಾಶದ ಗುಣಮಟ್ಟಗಳನ್ನು ರಾಜ್ಯ ಸರ್ಕಾರವು ನಿಯಮಿಸಬಹುದು.

10. ಸಮವಸ್ತ್ರಗಳು.—(1) ಮೋಟಾರು ಸಾರಿಗೆ ಉದ್ಯಮದ ನಿಯೋಜಕನನ್ನು, ಆ ಉದ್ಯಮದಲ್ಲಿ ನಿಯೋಜಿತರಾಗಿರುವ ಚಾಲಕರಿಗೆ, ನಿರ್ವಾಹಕರಿಗೆ ಮತ್ತು ಮಾರ್ಗ ಪರೀಕ್ಷಕ ಸಿಬ್ಬಂದಿಗೆ, ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸಂಖ್ಯೆಯ ಮತ್ತು ಅಂಥ ವಿಧದ ಸಮವಸ್ತ್ರಗಳನ್ನು, ಮಳೆ ಕೋಟುಗಳನ್ನು ಅಥವಾ ಚಳಿಯಿಂದ ಅವರು ರಕ್ಷಣೆ ಪಡೆಯುವುದಕ್ಕಾಗಿ ಇತರ ಅಂಥ ಸೌಕರ್ಯಗಳನ್ನು ಒದಗಿಸುವಂತೆ ಅಗತ್ಯಪಡಿಸುವ ನಿಯಮಗಳನ್ನು ಸರ್ಕಾರೀ **ರಾಜಪತ್ರ**ದಲ್ಲಿ ಅಧಿಸೂಚಿಸುವ ಮೂಲಕ ರಾಜ್ಯಸರ್ಕಾರವು ರಚಿಸಬಹುದು.

(2) ಚಾಲಕರಿಗೆ, ನಿರ್ವಾಹಕರಿಗೆ ಮತ್ತು ಮಾರ್ಗ ಪರೀಕ್ಷಕ ಸಿಬ್ಬಂದಿಗೆ (1)ನೇ ಉಪ-ಪ್ರಕರಣದ ಮೇರೆಗೆ ಒದಗಿಸಲಾದ ಸಮವಸ್ತ್ರಗಳನ್ನು ಒಗೆಯುವ ಬಗ್ಗೆ, ನಿಯಮಿಸಬಹುದಾದಂಥ ದರಗಳಲ್ಲಿ, ಭತ್ಯವನ್ನು ನಿಯೋಜಕನು ಸಂದಾಯ ಮಾಡತಕ್ಕುದು.

ಪರಂತು, ಸಮವಸ್ತ್ರಗಳನ್ನು ಒಗೆಯುವ ಬಗ್ಗೆ ತನ್ನ ಸ್ವಂತ ಖರ್ಚಿನಲ್ಲಿ ಸಾಕಷ್ಟು ವ್ಯವಸ್ಥೆಗಳನ್ನು ಮಾಡಿರುವ ನಿಯೋಜಕನು ಅಂಥ ಯಾವುದೇ ಭತ್ಯವನ್ನು ಸಂದಾಯ ಮಾಡತಕ್ಕುದಲ್ಲ.

11. ವೈದ್ಯಕೀಯ ಸೌಲಭ್ಯಗಳು.—ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಕಾರ್ಯನಿರ್ವಹಣ ಕೇಂದ್ರಗಳಲ್ಲಿ ಮತ್ತು ತಂಗು ನಿಲಾಣಗಳಲ್ಲಿ ಮೋಟಾರು ಸಾರಿಗೆ ಕೆಲಸಗಾರರಿಗೆ ಅಂಥ ವೈದ್ಯಕೀಯ ಸೌಲಭ್ಯಗಳು ಶೀಘ್ರವಾಗಿ ದೊರಕುವಂತೆ ನಿಯೋಜಕನು ಏರ್ಪಾಟು ಮಾಡತಕ್ಕುದು ಮತ್ತು ನಿರ್ವಹಿಸತಕ್ಕುದು.

12. ಪ್ರಥಮ ಚಿಕಿತ್ಸಾ ಸೌಲಭ್ಯಗಳು —(1) ಪ್ರತಿಯೊಂದು ಸಾರಿಗೆ ವಾಹನದಲ್ಲಿಯೂ, ಎಲ್ಲ ಕೆಲಸದ ವೇಳೆಯಲ್ಲೂ ತ್ವರಿತವಾಗಿ ದೊರೆಯುವಂತೆ ನಿಯಮಿಸಲಾದ ವಸ್ತುಗಳಿಂದ ಕೂಡಿದ ಪ್ರಥಮ ಚಿಕಿತ್ಸಾ ಪೆಟ್ಟಿಗೆಯನ್ನು ನಿಯೋಜಕನು ಒದಗಿಸತಕ್ಕುದು ಮತ್ತು ನಿರ್ವಹಿಸತಕ್ಕುದು.

(2) ನಿಯಮಿಸಲಾದ ವಸ್ತುಗಳನ್ನಲ್ಲದೆ ಬೇರೇನನ್ನೂ ಪ್ರಥಮ ಚಿಕಿತ್ಸಾ ಪೆಟ್ಟಿಗೆಯಲ್ಲಿ ಇಡತಕ್ಕುದಲ್ಲ.

(3) ಪ್ರಥಮ ಚಿಕಿತ್ಸಾ ಪೆಟ್ಟಿಗೆಯನ್ನು ಸಾರಿಗೆ ವಾಹನದ ಚಾಲಕನ ಅಥವಾ ನಿರ್ವಾಹಕನ ವಶದಲ್ಲಿಡತಕ್ಕುದು ಮತ್ತು ಅದರ ಉಪಯೋಗದ ಬಗ್ಗೆ ತರಬೇತಿ ಪಡೆಯುವ ಸೌಲಭ್ಯಗಳನ್ನೂ ಅವನಿಗೆ ಒದಗಿಸತಕ್ಕುದು.

## ಅಧ್ಯಾಯ—V

## ಕೆಲಸದ ವೇಳೆ ಮತ್ತು ಪರಿಮಿತಿಗಳು

13. ಮೋಟಾರು ಸಾರಿಗೆಯ ವಯಸ್ಕ ಕೆಲಸಗಾರರ ಕೆಲಸದ ವೇಳೆ.—ಮೋಟಾರು ಸಾರಿಗೆಯ ವಯಸ್ಕ ಕೆಲಸಗಾರನನ್ನು ಯಾವುದೇ ದಿನದಲ್ಲಿ ಎಂಟು ಗಂಟೆಗಳಿಗಿಂತ ಹೆಚ್ಚಿಗೆ ಮತ್ತು ಯಾವುದೇ ವಾರದಲ್ಲಿ ನಲವತ್ತೆಂಟು ಗಂಟೆಗಳಿಗಿಂತ ಹೆಚ್ಚಿಗೆ ಕೆಲಸ ಮಾಡುವಂತೆ ಅಗತ್ಯಪಡಿಸತಕ್ಕುದಲ್ಲ ಅಥವಾ ಹಾಗೆ ಮಾಡಲು ಅವನಿಗೆ ಅನುಮತಿ ಕೊಡತಕ್ಕುದಲ್ಲ.

ಪರಂತು, ಅಂಥ ಯಾವನೇ ಮೋಟಾರು ಸಾರಿಗೆ ಕೆಲಸಗಾರನು, ನಿಯಮಿಸಲಾದ ಪ್ರಾಧಿಕಾರವು ನಿಯಮಿಸಲಾದ ರೀತಿಯಲ್ಲಿ ಅಧಿಸೂಚಿಸಬಹುದಾದಂಥ ದೂರದ ಮಾರ್ಗಗಳಲ್ಲಿ, ಅಥವಾ ಅಂಥ ಹಬ್ಬದ ಮತ್ತು ಇತರ ಸಂದರ್ಭಗಳಲ್ಲಿ ಯಾವುದೇ ಮೋಟಾರು ಸಾರಿಗೆ ವಾಹನವನ್ನು ನಡೆಸತೊಡಗಿರುವಲ್ಲಿ, ನಿಯೋಜಕನು ಅಂಥ ಪ್ರಾಧಿಕಾರದ ಅನುಮೋದನೆಯನ್ನು ಪಡೆದು, ಅಂಥ ಮೋಟಾರು ಸಾರಿಗೆ ಕೆಲಸಗಾರನನ್ನು ಯಾವುದೇ ದಿನದಲ್ಲಿ ಎಂಟು ಗಂಟೆಗಳಿಗಿಂತ ಮತ್ತು ಯಾವುದೇ ವಾರದಲ್ಲಿ ನಲವತ್ತೆಂಟು ಗಂಟೆಗಳಿಗಿಂತ ಹೆಚ್ಚಿಗೆ ಕೆಲಸ ಮಾಡಲು ಅಗತ್ಯಪಡಿಸಬಹುದು ಅಥವಾ ಹಾಗೆ ಮಾಡಲು ಅವನಿಗೆ ಅನುಮತಿಯನ್ನು ಕೊಡಬಹುದು, ಆದರೆ ಯಾವುದೇ ಸಂದರ್ಭದಲ್ಲಿಯೂ, ಸಂದರ್ಭಾನುಸಾರ, ಒಂದು ದಿನದಲ್ಲಿ ಹತ್ತು ಗಂಟೆಗಳಿಗಿಂತ ಮತ್ತು ವಾರದಲ್ಲಿ ಐವತ್ನಾಲ್ಕು ಗಂಟೆಗಳಿಗಿಂತ ಹೆಚ್ಚಿಗೆ ಕೆಲಸಮಾಡಲು ಅಗತ್ಯಪಡಿಸಬಾರದು ಅಥವಾ ಅನುಮತಿ ಕೊಡಬಾರದು:

ಮತ್ತೂ ಪರಂತು, ಮೋಟಾರು ಓಡಾಟ ಕುಂಠಿತದ ಅಥವಾ ಅಸ್ತವ್ಯಸ್ತತೆಯ ಅಥವಾ ಸಂಚಾರಕ್ಕುಂಟಾದ ಅಡ್ಡಿಯ ಅಥವಾ ಪ್ರಕೃತಿ ಪ್ರಕೋಪದ ಸಂದರ್ಭದಲ್ಲಿ, ನಿಯೋಜಕನು, ನಿಯಮಿಸಬಹುದಾದಂಥ ಷರತ್ತುಗಳಿಗೆ ಮತ್ತು ಪರಿಮಿತಿಗಳಿಗೆ ಒಳಪಟ್ಟು, ಯಾವನೇ ಅಂಥ ಮೋಟಾರು ಸಾರಿಗೆ ಕೆಲಸಗಾರನನ್ನೂ ಯಾವುದೇ ದಿನದಲ್ಲಿ ಎಂಟು ಗಂಟೆಗಳಿಗಿಂತ ಅಥವಾ ಯಾವುದೇ ವಾರದಲ್ಲಿ ನಲವತ್ತೆಂಟು ಗಂಟೆಗಳಿಗಿಂತ ಹೆಚ್ಚಿಗೆ ಕೆಲಸ ಮಾಡುವಂತೆ ಅಗತ್ಯಪಡಿಸಬಹುದು ಅಥವಾ ಹಾಗೆ ಮಾಡಲು ಅವನಿಗೆ ಅನುಮತಿ ಕೊಡಬಹುದು.

14. ಮೋಟಾರು ಸಾರಿಗೆ ಕೆಲಸಗಾರರಾಗಿ ನಿಯೋಜಿತರಾದ ತರುಣರ ಕೆಲಸದ ವೇಳೆ.—ಯಾವುವೇ ಮೋಟಾರು ಸಾರಿಗೆ ಕೆಲಸಗಾರನಾಗಿ ಯಾವನೇ ತರುಣನನ್ನು.—

(ಕ) ವಿಶ್ರಾಂತಿಗಾಗಿ ಅರ್ಧ ಗಂಟೆಯ ವಿರಾಮದ ಕಾಲವನ್ನು ಒಳಗೊಂಡು ದಿನಕ್ಕೆ ಆರು ಗಂಟೆಗಿಂತ ಹೆಚ್ಚಿಗೆ ;

(ಖ) ರಾತ್ರಿ 10 ಗಂಟೆಯಿಂದ ಬೆಳಿಗ್ಗೆ 6 ಗಂಟೆಯ ನಡುವಣ ಅವಧಿಯಲ್ಲಿ ;

—ಕೆಲಸ ಮಾಡಲು ನಿಯೋಜಿಸತಕ್ಕದ್ದಲ್ಲ ಅಥವಾ ಅಗತ್ಯಪಡಿಸತಕ್ಕದ್ದಲ್ಲ.

15. ವಿಶ್ರಾಂತಿಗಾಗಿ ದೈನಿಕ ವಿರಾಮಕಾಲಗಳು.—(1) ಮೋಟಾರು ಸಾರಿಗೆಯ ವಯಸ್ಕ ಕೆಲಸಗಾರರ ಸಂಬಂಧದಲ್ಲಿ, ಯಾವುದೇ ಕೆಲಸದ ಅವಧಿಯು ಐದು ಗಂಟೆಗಳನ್ನು ಮೀರದ ಹಾಗೆ ಮತ್ತು ವಿಶ್ರಾಂತಿಗಾಗಿ ಕೊನೆಯ ಪಕ್ಷ ಅರ್ಧ ಗಂಟೆಯ ವಿರಾಮ ಕಾಲವನ್ನು ಪಡೆಯುವ ಮುಂಚೆ ಅಂಥ ಯಾವನೇ ಮೋಟಾರು ಸಾರಿಗೆ ಕೆಲಸಗಾರನು ಐದು ಗಂಟೆಗಳಿಗಿಂತ ಹೆಚ್ಚಾಗಿ ಕೆಲಸ ಮಾಡದ ಹಾಗೆ ಪ್ರತಿದಿನದ ಕೆಲಸದ ವೇಳೆಯನ್ನು ನಿಗದಿಪಡಿಸತಕ್ಕದ್ದು.

ಪರಂತು, ಈ ಉಪಪ್ರಕರಣದ ಉಪಬಂಧಗಳು, ವಿಶ್ರಾಂತಿಗಾಗಿ ಇರುವ ವಿರಾಮ ಕಾಲಕ್ಕೆ ಅವು ಸಂಬಂಧಿಸುವಷ್ಟರಮಟ್ಟಿಗೆ, ಆ ದಿನದಲ್ಲಿ ಆರು ಗಂಟೆಗಳಿಗಿಂತ ಹೆಚ್ಚಿಗೆ ಕೆಲಸ ಮಾಡಲು ಅಗತ್ಯಪಡಿಸಲಾಗಿರದ ಯಾವನೇ ಮೋಟಾರು ಸಾರಿಗೆ ಕೆಲಸಗಾರನಿಗೆ ಅನ್ವಯಿಸತಕ್ಕದ್ದಲ್ಲ.

(2) 13ನೇ ಪ್ರಕರಣದ ಎರಡನೇ ಪರಂತುಕದಲ್ಲಿ ಉಲ್ಲೇಖಿಸಲಾಗಿರುವ ಯಾವುದೇ ಸಂದರ್ಭವನ್ನು ಹೊರತುಪಡಿಸಿ, ಮೋಟಾರು ಸಾರಿಗೆ ಕೆಲಸಗಾರನಿಗೆ ಯಾವುದೇ ದಿನದ ಕರ್ತವ್ಯದ ಮುಕ್ತಾಯದ ಮತ್ತು ಮಾರನೆಯ ದಿನದ ಕರ್ತವ್ಯದ ಪ್ರಾರಂಭದ ನಡುವೆ ಕೊನೆಯಪಕ್ಷ ಒಂಬತ್ತು ಗಂಟೆಗಳ ಸತತ ವಿಶ್ರಾಂತಿಯ ಅವಧಿಯು ದೊರೆಯುವಂತೆ, ಪ್ರತಿಯೊಂದು ದಿನದ ಕೆಲಸದ ವೇಳೆಯನ್ನು ನಿಗದಿಪಡಿಸತಕ್ಕದ್ದು.

16. ಕಾಲವ್ಯಾಪ್ತಿ.—(1) ಯಾವನೇ ಮೋಟಾರು ಸಾರಿಗೆ ವಯಸ್ಕ ಕೆಲಸಗಾರನ ಕೆಲಸದ ವೇಳೆಯನ್ನು, 13ನೇ ಪ್ರಕರಣದ ಎರಡನೆಯ ಪರಂತುಕದಲ್ಲಿ ಉಲ್ಲೇಖಿಸಲಾಗಿರುವ ಯಾವುದೇ ಸಂದರ್ಭವನ್ನು ಹೊರತುಪಡಿಸಿ, 15ನೇ ಪ್ರಕರಣದ ಮೇರೆಗೆ ವಿಶ್ರಾಂತಿಗಾಗಿ ಇರುವ ವಿರಾಮಕಾಲವನ್ನು ಒಳಗೊಂಡಂತೆ, ಯಾವುದೇ ದಿನದಲ್ಲಿ ಹನ್ನೆರಡು ಗಂಟೆಗಳಿಗಿಂತ ಹೆಚ್ಚಾಗಿ ವ್ಯಾಪ್ತವಾಗದಂತೆ ವ್ಯವಸ್ಥೆಗೊಳಿಸತಕ್ಕದ್ದು.

(2) ಯಾವನೇ ಮೋಟಾರು ಸಾರಿಗೆಯ ತರುಣ ಕೆಲಸಗಾರನ ಕೆಲಸದ ವೇಳೆಯನ್ನು, 14ನೇ ಪ್ರಕರಣದ ಮೇರೆಗೆ ವಿಶ್ರಾಂತಿಗಾಗಿ ಇರುವ ವಿರಾಮ ಕಾಲವನ್ನೂ ಒಳಗೊಂಡಂತೆ, ಅದು ಯಾವುದೇ ದಿನದಲ್ಲಿ ಒಂಬತ್ತು ಗಂಟೆಗಳಿಗಿಂತ ಹೆಚ್ಚಾಗಿ ವ್ಯಾಪ್ತವಾಗದಂತೆ ವ್ಯವಸ್ಥೆಗೊಳಿಸತಕ್ಕದ್ದು.

17. ವಿಭಜಿತ ಕರ್ತವ್ಯಕಾಲ.—ಈ ಅಧಿನಿಯಮದಲ್ಲಿ ಅಡಕವಾಗಿರುವ ಇತರ ಉಪಬಂಧಗಳಿಗೆ ಒಳಪಟ್ಟು, ಮೋಟಾರು ಸಾರಿಗೆ ಕೆಲಸಗಾರನ ಕೆಲಸದ ವೇಳೆಯನ್ನು ಯಾವುದೇ ದಿನದಲ್ಲಿ ಎರಡಕ್ಕಿಂತ ಹೆಚ್ಚು ಸರದಿಗಳನ್ನಾಗಿ ವಿಭಜಿಸತಕ್ಕದ್ದಲ್ಲ.

18. ಕೆಲಸದ ವೇಳೆಯ ನೋಟೀಸು.—(1) ಮೋಟಾರು ಸಾರಿಗೆ ಕೆಲಸಗಾರರನ್ನು ಪ್ರತಿದಿನವೂ ಕೆಲಸ ಮಾಡಲು ಅಗತ್ಯಪಡಿಸಬಹುದಾದ ಗಂಟೆಗಳ ಅವಧಿಯನ್ನು ಸ್ಪಷ್ಟವಾಗಿ ತೋರಿಸುವ ಕೆಲಸದ ವೇಳೆಯ ನೋಟೀಸನ್ನು ಪ್ರತಿಯೊಬ್ಬ ನಿಯೋಜಕನೂ, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಪ್ರದರ್ಶಿಸತಕ್ಕದ್ದು ಹಾಗು ಸರಿಯಾಗಿ ಇಟ್ಟುಕೊಂಡು ಬರತಕ್ಕದ್ದು.

(2) ಈ ಅಧಿನಿಯಮದಲ್ಲಿ ಅಡಕವಾಗಿರುವ ಇತರ ಉಪಬಂಧಗಳಿಗೆ ಒಳಪಟ್ಟು, ಹಾಗೆ ಪ್ರದರ್ಶಿಸಲಾದ ಕೆಲಸದ ವೇಳೆಯ ನೋಟೀಸಿಗನುಸಾರವಾಗಿಯಲ್ಲದೆ ಅನ್ಯಥಾ, ಯಾವನೇ ಅಂಥ ಮೋಟಾರು ಸಾರಿಗೆ ಕೆಲಸಗಾರನನ್ನು ಕೆಲಸ ಮಾಡಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಅನುಮತಿಸತಕ್ಕದ್ದಲ್ಲ.

19. ವಾರದ ವಿಶ್ರಾಂತಿ.—(1) ಮೋಟಾರು ಸಾರಿಗೆಯ ಎಲ್ಲ ಕೆಲಸಗಾರರಿಗೂ ಪ್ರತಿ ಏಳು ದಿನಗಳ ಅವಧಿಯಲ್ಲಿ ಒಂದು ವಿಶ್ರಾಂತಿಯ ದಿನವು ದೊರೆಯುವಂತೆ ಏರ್ಪಾಡು ಮಾಡುವ ಬಗ್ಗೆ ರಾಜ್ಯ ಸರ್ಕಾರವು ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ ನಿಯಮಗಳನ್ನು ರಚಿಸಬಹುದು.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಮೋಟಾರು ಸಾರಿಗೆ ಸೇವೆಯಲ್ಲಿನ ಯಾವುದೇ ಅಸ್ತವ್ಯಸ್ತತೆಯನ್ನು ತಡೆಗಟ್ಟುವುದಕ್ಕಾಗಿ ರಜಾ ದಿನವಲ್ಲದ ಯಾವುದೇ ವಿಶ್ರಾಂತಿ ದಿನದಂದು ಕೆಲಸಮಾಡುವಂತೆ ಮೋಟಾರು ಸಾರಿಗೆ ಕೆಲಸಗಾರನನ್ನು ನಿಯೋಜಕನು ಅಗತ್ಯಪಡಿಸಬಹುದು; ಹೀಗಿದ್ದಾಗ್ಯೂ, ಮೋಟಾರು ಸಾರಿಗೆ ಕೆಲಸಗಾರನು ಮಧ್ಯೆ ಒಂದು ಪೂರ್ತಿ ದಿನದ ರಜೆ ಇಲ್ಲದೆ ಸತತ ಹತ್ತು ದಿನಗಳಿಗಿಂತ ಹೆಚ್ಚಿಗೆ ಕೆಲಸಮಾಡುವಂತಿಲ್ಲ.

(3) (1)ನೇ ಉಪಪ್ರಕರಣದಲ್ಲಿ ಇರುವುದು ಯಾವುದೂ, ರಜೆಯಲ್ಲಿ ಕಳೆದ ಯಾವುದೇ ದಿನವನ್ನು ಒಳಗೊಂಡು ಉದ್ಯೋಗದ ಒಟ್ಟು ಅವಧಿಯು ಆರು ದಿನಗಳಿಗಿಂತ ಕಡಿಮೆ ಇರುವ ಮೋಟಾರು ಸಾರಿಗೆಯ ಯಾವನೇ ಕೆಲಸಗಾರನಿಗೆ ಅನ್ವಯಿಸತಕ್ಕದ್ದಲ್ಲ.

20. ಪರಿಹಾರ ರೂಪದ ವಿಶ್ರಾಂತಿಯ ದಿನ.—ಈ ಅಧಿನಿಯಮದ ಉಪಬಂಧಗಳ ಮೇರೆಗೆ 19ನೇ ಪ್ರಕರಣದ ಪ್ರವರ್ತನೆಯಿಂದ ನಿಯೋಜಕನಿಗೆ ಕೊಡಲಾಗಿರುವ ಯಾವುದೇ ವಿನಾಯಿತಿಯ ಕಾರಣದಿಂದಾಗಿ, ಆ ಪ್ರಕರಣದ ಮೇರೆಗೆ ಮೋಟಾರು ಸಾರಿಗೆ ಕೆಲಸಗಾರನಿಗೆ ಹಕ್ಕಿರುವ ವಿಶ್ರಾಂತಿಯ ಯಾವುವೇ ದಿನಗಳನ್ನು ಅವನಿಗೆ ತಪ್ಪಿಸಲಾಗಿರುವಲ್ಲಿ, ಆ ಮೋಟಾರು ಸಾರಿಗೆ ಕೆಲಸಗಾರನಿಗೆ ಯಾವ ತಿಂಗಳಲ್ಲಿ ವಿಶ್ರಾಂತಿ ದಿನಗಳು ದೊರೆಯಬೇಕಾಗಿದ್ದುವೋ ಆ ತಿಂಗಳಿನಲ್ಲಿ ಅಥವಾ ಆ ತಿಂಗಳಿನ ನಿಕಟತರುವಾಯದ ಎರಡು ತಿಂಗಳುಗಳೊಳಗೆ, ಹಾಗೆ ಅವನು ಕಳೆದುಕೊಂಡ ವಿಶ್ರಾಂತಿ ದಿನಗಳಿಗೆ ಸಮನಾದ ಸಂಖ್ಯೆಯ ಪರಿಹಾರ ರೂಪದ ವಿಶ್ರಾಂತಿ ದಿನಗಳನ್ನು ಪಡೆಯಲು ಅವನಿಗೆ ಅನುಮತಿಸತಕ್ಕದ್ದು.

## ಅಧ್ಯಾಯ—VI

### ಚಿಕ್ಕವಯಸ್ಸಿನ ವ್ಯಕ್ತಿಗಳನ್ನು ನಿಯೋಜಿಸಿಕೊಳ್ಳುವುದು

21. ಮಕ್ಕಳನ್ನು ನಿಯೋಜಿಸಿಕೊಳ್ಳಲು ನಿಷೇಧ.—ಯಾವುದೇ ಮೋಟಾರು ಸಾರಿಗೆ ಉದ್ಯಮದಲ್ಲಿ, ಯಾವುದೇ ಮಗುವನ್ನು ಯಾವುದೇ ಉದ್ಯೋಗದಲ್ಲಿ ಕೆಲಸಮಾಡುವಂತೆ ಅಗತ್ಯಪಡಿಸತಕ್ಕದ್ದಲ್ಲ ಅಥವಾ ಕೆಲಸ ಮಾಡಲು ಅನುಮತಿಸತಕ್ಕದ್ದಲ್ಲ.

22. ಮೋಟಾರು ಸಾರಿಗೆ ಕೆಲಸಗಾರರಾಗಿ ನಿಯೋಜಿತರಾದ ತರುಣರು ಬಿಲ್ಲೆಗಳನ್ನು ಧರಿಸತಕ್ಕದ್ದು.—ಯಾವುದೇ ಮೋಟಾರು ಸಾರಿಗೆ ಉದ್ಯಮದಲ್ಲಿ ಯಾವನೇ ತರುಣನನ್ನು,—

(ಕ) 23ನೇ ಪ್ರಕರಣದ ಮೇರೆಗೆ ಅವನಿಗೆ ಸಂಬಂಧಿಸಿ ಕೊಡಲಾದ ದಾರ್ಢ್ಯ ಪ್ರಮಾಣಪತ್ರವು ನಿಯೋಜಕನ ಅಭಿರಕ್ಷೆಯಲ್ಲಿದ್ದ ಹೊರತು ; ಮತ್ತು

(ಖ) ಅಂಥ ಪ್ರಮಾಣಪತ್ರಕ್ಕೆ ಸಂಬಂಧಿಸಿದಂತೆ ಕೊಟ್ಟಿರುವ ಬಿಲ್ಲೆಯನ್ನು ಅಂಥ ತರುಣನು ತಾನು ಕೆಲಸಮಾಡುವಾಗ ತನ್ನ ಹತ್ತಿರ ಇಟ್ಟು ಕೊಂಡಿರುವ ಹೊರತು ;

—ಮೋಟಾರು ಸಾರಿಗೆ ಕೆಲಸಗಾರನಾಗಿ ಕೆಲಸಮಾಡುವಂತೆ ಅಗತ್ಯಪಡಿಸತಕ್ಕದ್ದಲ್ಲ ಅಥವಾ ಕೆಲಸಮಾಡಲು ಅನುಮತಿಸತಕ್ಕದ್ದಲ್ಲ.

23. ದಾರ್ಢ್ಯಪ್ರಮಾಣಪತ್ರ.—(1) ಯಾವನೇ ತರುಣನು ಅಥವಾ ಅವನ ಹೆತ್ತವರು ಅಥವಾ ಪಾಲಕನು ಮೋಟಾರು ಸಾರಿಗೆ ಉದ್ಯಮದಲ್ಲಿ ಮೋಟಾರುಸಾರಿಗೆ ಕೆಲಸಗಾರನಾಗಿ ಕೆಲಸ ಮಾಡಲು ದಾರ್ಢ್ಯವುಳ್ಳವನೆಂದು ಪ್ರಮಾಣೀಕರಿಸಿದರೆ ಅವನನ್ನು ಹಾಗೆ ಕೆಲಸಕ್ಕೆ ನಿಯೋಜಿಸಿಕೊಳ್ಳುವುದಾಗಿ ನಿಯೋಜಕನು ಅಥವಾ ಅವನ ಪರವಾಗಿ ಯಾವನೇ ವ್ಯಕ್ತಿಯು ಸಹಿ ಮಾಡಿಕೊಟ್ಟ ದಸ್ತಾವೇಜಿನೊಂದಿಗೆ ಸಲ್ಲಿಸಿದ ಅರ್ಜಿಯ ಮೇಲೆ, ಅಥವಾ ಕೆಲಸಮಾಡಲು ಆಶಿಸುವ ಯಾವನೇ ತರುಣನಿಗೆ ಸಂಬಂಧಿಸಿ ನಿಯೋಜಕನು ಅಥವಾ ಅವನ ಪರವಾಗಿ ಯಾವನೇ ಇತರ ವ್ಯಕ್ತಿಯು ಸಲ್ಲಿಸಿದ ಅರ್ಜಿಯ ಮೇಲೆ, ಅಂಥ ತರುಣನನ್ನು ಪ್ರಮಾಣೀಕರಿಸುವ ಶಸ್ತ್ರವೈದ್ಯನು ಪರೀಕ್ಷಿಸಬಹುದು ಮತ್ತು ಮೋಟಾರು ಸಾರಿಗೆ ಕೆಲಸಗಾರನಾಗಿ ಕೆಲಸ ಮಾಡಲು ಅವನಿಗಿರುವ ದಾರ್ಢ್ಯತೆಯನ್ನು ನಿಶ್ಚಿತಪಡಿಸಿಕೊಳ್ಳತಕ್ಕದ್ದು.

(2) ಈ ಪ್ರಕರಣದ ಮೇರೆಗೆ ಕೊಡಲಾದ ದಾರ್ಢ್ಯ ಪ್ರಮಾಣಪತ್ರವು ಅದರ ದಿನಾಂಕದಿಂದ ಹನ್ನೆರಡು ತಿಂಗಳ ಅವಧಿಯವರೆಗೆ ಸಿಂಧುವಾಗಿರತಕ್ಕದ್ದು, ಆದರೆ ಅದನ್ನು ನವೀಕರಿಸಬಹುದು.

(3) ಈ ಪ್ರಕರಣದ ಮೇರೆಗೆ ಪ್ರಮಾಣಪತ್ರಕ್ಕಾಗಿ ಸಂದಾಯ ಮಾಡಬೇಕಾಗಿರುವ ಯಾವುದೇ ಫೀಜನ್ನು ನಿಯೋಜಕನು ಸಂದಾಯ ಮಾಡತಕ್ಕದ್ದು ಮತ್ತು ಅದನ್ನು ಆ ತರುಣನಿಂದ, ಅವನ ಹೆತ್ತವರಿಂದ ಅಥವಾ ಪಾಲಕನಿಂದ ವಸೂಲು ಮಾಡತಕ್ಕದ್ದಲ್ಲ.

24. ವೈದ್ಯಕೀಯ ಪರೀಕ್ಷೆಯನ್ನು ಅಗತ್ಯಪಡಿಸುವ ಅಧಿಕಾರ.—ಯಾವುದೇ ಮೋಟಾರು ಸಾರಿಗೆ ಉದ್ಯಮದಲ್ಲಿ ದಾರ್ಢ್ಯಪ್ರಮಾಣಪತ್ರವಿಲ್ಲದೆ ಕೆಲಸಮಾಡುತ್ತಿರುವ ಮೋಟಾರು ಸಾರಿಗೆ ಕೆಲಸಗಾರನು ತರುಣನೆಂದು ಪರಿಶೀಲಕನು ಅಭಿಪ್ರಾಯಪಟ್ಟಲ್ಲಿ ಪ್ರಮಾಣೀಕರಿಸುವ ಶಸ್ತ್ರವೈದ್ಯನು ಅಂಥ ಮೋಟಾರು ಸಾರಿಗೆಯ ತರುಣ ಕೆಲಸಗಾರನನ್ನು ಪರೀಕ್ಷಿಸತಕ್ಕದ್ದೆಂದು ಅಗತ್ಯಪಡಿಸುವ ನೋಟೀಸನ್ನು ಪರಿಶೀಲಕನು ನಿಯೋಜಕನಿಗೆ ಜಾರಿ ಮಾಡಬಹುದು ಮತ್ತು ಪರಿಶೀಲಕನು ಹಾಗೆ ನಿರ್ದೇಶಿಸಿದಲ್ಲಿ, ಅಂಥ ಮೋಟಾರು ಸಾರಿಗೆಯ ತರುಣ ಕೆಲಸಗಾರನು ಹಾಗೆ ಪರೀಕ್ಷಿತನಾಗುವವರೆಗೆ ಮತ್ತು 23ನೇ ಪ್ರಕರಣದ ಮೇರೆಗೆ ಆತನಿಗೆ ದಾರ್ಢ್ಯ ಪ್ರಮಾಣ ಪತ್ರವನ್ನು ಕೊಡುವವರೆಗೆ, ಯಾವುದೇ ಮೋಟಾರು ಸಾರಿಗೆ ಉದ್ಯಮದಲ್ಲಿ ಕೆಲಸ ಮಾಡಲು ನಿಯೋಜಿತನಾಗತಕ್ಕದ್ದಲ್ಲ ಅಥವಾ ಕೆಲಸಮಾಡಲು ಅವನಿಗೆ ಅನುಮತಿಸತಕ್ಕದ್ದಲ್ಲ.

## ಅಧ್ಯಾಯ—VII

### ಮಂಜೂರಿ ಮತ್ತು ರಜೆ

25. ಮೋಟಾರು ಸಾರಿಗೆ ಕೆಲಸಗಾರರ ಮಂಜೂರಿಯ ಸಂದಾಯಕ್ಕೆ 1936ರ 4ನೇ ಅಧಿನಿಯಮವು ಅನ್ವಯಿಸತಕ್ಕದ್ದು.—ತತ್ಕಾಲದಲ್ಲಿ ಜಾರಿಯಲ್ಲಿರುವ ಮಂಜೂರಿ ಸಂದಾಯ ಅಧಿನಿಯಮ, 1936ರ 1ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ರಾಜ್ಯ ಸರ್ಕಾರದ ಅಧಿಸೂಚನೆಯ ಮೂಲಕ ಅಂಥ ಮೋಟಾರು ಸಾರಿಗೆ ಕೆಲಸಗಾರರ ಮಂಜೂರಿಯ ಸಂದಾಯಕ್ಕೆ ಸದರಿ ಅಧಿನಿಯಮವು ವ್ಯಾಪ್ತವಾಗಿದ್ದರೆ ಹೇಗೋ ಹಾಗೆ, ಮತ್ತು ಸದರಿ ಅಧಿನಿಯಮದ ಅರ್ಥ ವ್ಯಾಪ್ತಿಯೊಳಗೆ ಮೋಟಾರು ಸಾರಿಗೆ ಉದ್ಯಮವು ಒಂದು ಕೈಗಾರಿಕಾ ಸಂಸ್ಥೆಯಾಗಿದ್ದರೆ ಹೇಗೋ ಹಾಗೆ, ಕೈಗಾರಿಕಾ ಸಂಸ್ಥೆಯಲ್ಲಿ ಸಂದಾಯ ಮಾಡಬೇಕಾಗಿರುವ ಮಂಜೂರಿಗಳಿಗೆ ಅನ್ವಯವಾಗುವಂತೆ, ಮೋಟಾರು ಸಾರಿಗೆ ಉದ್ಯಮದಲ್ಲಿ ತೊಡಗಿರುವ ಮೋಟಾರು ಸಾರಿಗೆ ಕೆಲಸಗಾರರಿಗೆ ಅನ್ವಯವಾಗತಕ್ಕದ್ದು.

26. ಅಧಿಕಕಾಲಿಕ ಕೆಲಸಕ್ಕೆ ಹೆಚ್ಚಿನ ಮಂಜೂರಿ.—(1) 13ನೇ ಪ್ರಕರಣದ ಮೊದಲನೆಯ ಪರಂತುಕದಲ್ಲಿ ಉಲ್ಲೇಖಿಸಲಾಗಿರುವ ಯಾವುದೇ ಸಂದರ್ಭದಲ್ಲಿ ಮೋಟಾರು ಸಾರಿಗೆಯ ವಯಸ್ಕ ಕೆಲಸಗಾರನು ಯಾವುದೇ ದಿನ ಎಂಟು ಗಂಟೆಗಳಿಗಿಂತ ಹೆಚ್ಚಿಗೆ ಕೆಲಸ ಮಾಡಿರುವಲ್ಲಿ ಅಥವಾ 19ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗಿನ ಯಾವುದೇ ವಿಶ್ರಾಂತಿಯ ದಿನದಂದು ಕೆಲಸ ಮಾಡಲು ಅವನನ್ನು ಅಗತ್ಯಪಡಿಸಿರುವಲ್ಲಿ, ಸಂದರ್ಭಾನುಸಾರ, ಅಧಿಕಕಾಲಿಕ ಕೆಲಸದ ಸಂಬಂಧದಲ್ಲಿ ಅಥವಾ ವಿಶ್ರಾಂತಿಯ ದಿನದಂದು ಮಾಡಿದ ಕೆಲಸದ ಸಂಬಂಧದಲ್ಲಿ ಅವನ ಮಂಜೂರಿಯ ಸಾಧಾರಣ ದರದ ಎರಡರಷ್ಟು ದರದಲ್ಲಿ ಮಂಜೂರಿಯನ್ನು ಪಡೆಯಲು ಅವನು ಹಕ್ಕುಳ್ಳವನಾಗಿರತಕ್ಕದ್ದು.

(2) 13ನೇ ಪ್ರಕರಣದ ಎರಡನೆಯ ಪರಂತುಕದಲ್ಲಿ ಉಲ್ಲೇಖಿಸಲಾಗಿರುವ ಯಾವುದೇ ಸಂದರ್ಭದಲ್ಲಿ ಮೋಟಾರು ಸಾರಿಗೆಯ ವಯಸ್ಕ ಕೆಲಸಗಾರನು ಯಾವುದೇ ದಿನದಲ್ಲಿ ಎಂಟಕ್ಕಿಂತ ಹೆಚ್ಚು ಗಂಟೆಗಳವರೆಗೆ ಕೆಲಸ ಮಾಡಿರುವಲ್ಲಿ, ಅಧಿಕಕಾಲಿಕ ಕೆಲಸಕ್ಕೆ ಸಂಬಂಧಿಸಿ ನಿಯಮಿಸಬಹುದಾದಂಥ ದರಗಳಲ್ಲಿ ಮಂಜೂರಿಯನ್ನು ಪಡೆಯಲು ಅವನು ಹಕ್ಕುಳ್ಳವನಾಗಿರತಕ್ಕದ್ದು.

(3) 19ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ವಿಶ್ರಾಂತಿಯ ಯಾವುದೇ ದಿನದಂದು ಮೋಟಾರು ಸಾರಿಗೆಯ ತರುಣ ಕೆಲಸಗಾರನನ್ನು ಕೆಲಸ ಮಾಡಲು ಅಗತ್ಯಪಡಿಸಿರುವಲ್ಲಿ, ವಿಶ್ರಾಂತಿಯ ದಿನದಂದು ಮಾಡಿದ ಕೆಲಸಕ್ಕೆ ಸಂಬಂಧಿಸಿ ಅವನ ಮಜೂರಿಯ ಸಾಧಾರಣ ದರದ ಎರಡರಷ್ಟು ದರದಲ್ಲಿ ಮಜೂರಿಯನ್ನು ಪಡೆಯಲು ಅವನು ಹಕ್ಕುಳ್ಳವನಾಗಿರತಕ್ಕದ್ದು.

(4) ಈ ಪ್ರಕರಣದ ಉದ್ದೇಶಗಳಿಗಾಗಿ, ಮೋಟಾರು ಸಾರಿಗೆ ಕೆಲಸಗಾರನಿಗೆ ಸಂಬಂಧಿಸಿ 'ಮಂಜೂರಿಯ ಸಾಧಾರಣ ದರ' ಎಂದರೆ, ತುಟ್ಟಿ ಭತ್ಯ ಸಹಿತವಾದ ಅವನ ಮೂಲ ಮಂಜೂರಿ.

27. ಮಜೂರಿ ಸಹಿತವಾದ ವಾರ್ಷಿಕ ರಜಾ.—(1) ನಿಯಮಿಸಬಹುದಾದಂಥ ರಜಾ ದಿನಗಳಿಗೆ ಪ್ರತಿಕೂಲವಾಗದಂತೆ, ಒಂದು ಕ್ಯಾಲೆಂಡರ್ ವರ್ಷದಲ್ಲಿ ಇನ್ನೂರ ನಲವತ್ತು ದಿನಗಳ ಅಥವಾ ಹೆಚ್ಚಿನ ಅವಧಿಯವರೆಗೆ ಕೆಲಸ ಮಾಡಿದ ಪ್ರತಿಯೊಬ್ಬ ಮೋಟಾರು ಸಾರಿಗೆ ಕೆಲಸಗಾರನಿಗೆ, ತರುವಾಯದ ಕ್ಯಾಲೆಂಡರ್ ವರ್ಷದಲ್ಲಿ,—

(ಕ) ವಯಸ್ಕನಾಗಿದ್ದರೆ, ಹಿಂದಿನ ಕ್ಯಾಲೆಂಡರ್ ವರ್ಷದ ಅವಧಿಯಲ್ಲಿ ಅವನು ಕೆಲಸಮಾಡಿದ ಪ್ರತಿ ಇಪ್ಪತ್ತು ದಿನಗಳಿಗೆ ಒಂದು ದಿನದ ಮತ್ತು

(ಖ) ತರುಣನಾಗಿದ್ದರೆ, ಹಿಂದಿನ ಕ್ಯಾಲೆಂಡರ್ ವರ್ಷದ ಅವಧಿಯಲ್ಲಿ ಅವನು ಕೆಲಸಮಾಡಿದ ಪ್ರತಿ ಹದಿನೈದು ದಿನಗಳಿಗೆ ಒಂದು ದಿನದ —ದರದಲ್ಲಿ ಲೆಕ್ಕಹಾಕಿ ಅಷ್ಟು ದಿನಗಳ ಬಗ್ಗೆ ಮಜೂರಿ ಸಹಿತವಾದ ರಜೆಯನ್ನು ಪಡೆಯಲು ಅನುಮತಿಯನ್ನು ಕೊಡತಕ್ಕದು.

(2) ಮೋಟಾರು ಸಾರಿಗೆ ಕೆಲಸಗಾರನ ಸೇವೆಯು ಜನವರಿ ಒಂದನೆಯ ದಿನದಿಂದಲ್ಲದೆ ಅನ್ಯಥಾ ಪ್ರಾರಂಭವಾಗಿರುವಾಗ, ಆ ಕ್ಯಾಲೆಂಡರ್ ವರ್ಷದಲ್ಲಿ ಉಳಿದ ಒಟ್ಟು ದಿನಗಳ ಮೂರನೇ ಎರಡರಷ್ಟು ದಿನಗಳವರೆಗೆ ಅವನು ಕೆಲಸ ಮಾಡಿದ್ದರೆ, ಸಂದರ್ಭಾನುಸಾರ, (1)ನೇ ಉಪ-ಪ್ರಕರಣದ (ಕ) ಖಂಡದಲ್ಲಿ ಅಥವಾ (ಖ) ಖಂಡದಲ್ಲಿ ನಮೂದಿಸಲಾಗಿರುವ ದರದಲ್ಲಿ ಮಜೂರಿ ಸಹಿತವಾದ ರಜೆಯನ್ನು ಪಡೆಯಲು ಅವನು ಹಕ್ಕುಳ್ಳವನಾಗಿ ತಕ್ಕದು ;

(3) ಮೋಟಾರು ಸಾರಿಗೆ ಕೆಲಸಗಾರನನ್ನು ಆ ವರ್ಷದಲ್ಲಿ ಸೇವೆಯಿಂದ ಬಿಡುಗಡೆ ಮಾಡಿದರೆ ಅಥವಾ ವಜಾ ಮಾಡಿದರೆ, ಅವನಿಗೆ ಗಳಿಕೆ ರಜದ ಹಕ್ಕನ್ನು ಕೊಡುವ (1)ನೇ ಉಪ-ಪ್ರಕರಣದಲ್ಲಿ ಅಥವಾ (2)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪೂರ್ತಿ ಅವಧಿಯವರೆಗೆ ಅವನು ಕೆಲಸ ಮಾಡಿರದಿದ್ದರೂ, (1)ನೇ ಉಪ-ಪ್ರಕರಣದಲ್ಲಿ ನಮೂದಿಸಲಾಗಿರುವ ದರದಲ್ಲಿ ಮಜೂರಿ ಸಹಿತವಾಗಿ ರಜೆಯನ್ನು ಪಡೆಯಲು ಅವನು ಹಕ್ಕುಳ್ಳವನಾಗಿರತಕ್ಕದು.

(4) ಈ ಪ್ರಕರಣದ ಮೇರೆಗೆ ರಜೆಯನ್ನು ಲೆಕ್ಕ ಹಾಕುವಲ್ಲಿ, ಅರ್ಧ ದಿನದ ಅಥವಾ ಅದಕ್ಕಿಂತ ಹೆಚ್ಚಿನ ರಜೆಯ ಭಾಗವನ್ನು ಒಂದು ಪೂರ್ಣ ದಿನದ ರಜೆಯೆಂಬುದಾಗಿ ಪರಿಗಣಿಸತಕ್ಕದು, ಮತ್ತು ಅರ್ಧ ದಿನಕ್ಕಿಂತ ಕಡಮೆಯಾದ ಭಾಗವನ್ನು ಬಿಟ್ಟುಬಿಡತಕ್ಕದು.

(5) ಮೋಟಾರು ಸಾರಿಗೆ ಕೆಲಸಗಾರನು, ಸಂದರ್ಭಾನುಸಾರ, (1)ನೇ ಉಪ-ಪ್ರಕರಣದ ಅಥವಾ (2)ನೇ ಉಪ-ಪ್ರಕರಣದ ಮೇರೆಗೆ ತನಗೆ ಕೊಡಲಾದ ಪೂರ್ಣ ರಜೆಯನ್ನು ಯಾವುದೇ ಕ್ಯಾಲೆಂಡರ್ ವರ್ಷದಲ್ಲಿ ತೆಗೆದುಕೊಳ್ಳದೆ ಇದ್ದರೆ, ಅವನು ತೆಗೆದುಕೊಳ್ಳದೆ ಇದ್ದ ಯಾವುದೇ ರಜೆಯನ್ನು ಮುಂದಿನ ಕ್ಯಾಲೆಂಡರ್ ವರ್ಷದಲ್ಲಿ ಅವನಿಗೆ ಕೊಡಬಹುದಾದ ರಜೆಯೊಂದಿಗೆ ಸೇರಿಸತಕ್ಕದು :

ಪರಂತು, ಮುಂದಿನ ವರ್ಷಕ್ಕೆ ಮುಂದುವರಿಸಬಹುದಾದ ರಜಾ ದಿನಗಳ ಒಟ್ಟು ಸಂಖ್ಯೆಯು, ವಯಸ್ಕನಿಗೆ ಸಂಬಂಧಿಸಿ, ಮೂವತ್ತಕ್ಕೆ ಅಥವಾ ತರುಣನಿಗೆ ಸಂಬಂಧಿಸಿ ನಲವತ್ತಕ್ಕೆ ಮೀರತಕ್ಕದಲ್ಲ.

(6) ಈ ಪ್ರಕರಣದಲ್ಲಿ 'ಕ್ಯಾಲೆಂಡರ್ ವರ್ಷ' ಎಂದರೆ, ಜನವರಿ ಮೊದಲನೆಯ ದಿನದಂದು ಪ್ರಾರಂಭವಾಗುವ ವರ್ಷ,

ವಿವರಣೆ.—ಈ ಪ್ರಕರಣದ ಉದ್ದೇಶಗಳಿಗಾಗಿ, ವಾರದ ರಜಾ ದಿನಗಳನ್ನು ಅಥವಾ ಹಬ್ಬದ ರಜಾ ದಿನಗಳನ್ನು ಅಥವಾ ರಜೆ ಅವಧಿಯ ಪ್ರಾರಂಭದಲ್ಲಿ ಅಥವಾ ಕೊನೆಯಲ್ಲಿ ಬರುವ ಇತರ ಅಂಥದೇ ಸಂದರ್ಭಗಳಲ್ಲಿನ ರಜೆಗಳನ್ನು ಈ ರಜೆಯು ಒಳಗೊಳ್ಳತಕ್ಕದಲ್ಲ.

28. ರಜಾ ಅವಧಿಯಲ್ಲಿ ಮಜೂರಿ.—(1) 27ನೇ ಪ್ರಕರಣದ ಮೇರೆಗೆ ಮೋಟಾರು ಸಾರಿಗೆ ಕೆಲಸಗಾರನಿಗೆ ಕೊಡಲಾದ ರಜೆಯ ಬಗ್ಗೆ, ಅವನ ರಜೆಯ ನಿಕಟಪೂರ್ವದ ತಿಂಗಳಿನಲ್ಲಿ ಅವನು ಕೆಲಸ ಮಾಡಿದ ದಿನಗಳಿಗೆ ಸಂಬಂಧಿಸಿ ಅವನ ಒಟ್ಟು ಪೂರ್ಣ ಕಾಲದ ಮಜೂರಿಯ ದಿನನಿತ್ಯದ ಸರಾಸರಿಗೆ ಸಮನಾದ ದರದಲ್ಲಿ, ಯಾವುದೇ ಅಧಿಕಕಾಲಿಕ ಗಳಿಕೆಗಳು ಮತ್ತು ಬೋನಸ್ಸು ಏನಾದರೂ ಇದ್ದರೆ ಅವುಗಳನ್ನು ಬಿಟ್ಟು, ಆದರೆ ತುಟ್ಟಿ ಭತ್ಯವನ್ನು ಮತ್ತು ಅವನು ಕೆಲಸ ಮಾಡಿದ ದಿನಕ್ಕಾಗಿ ಆಹಾರಧಾನ್ಯಗಳನ್ನು ನಿಯೋಜಕನು ರಿಯಾಯಿತಿಯಲ್ಲಿ ಸರಬರಾಜು ಮಾಡಿದ್ದರಿಂದ ಆದ ಪ್ರಯೋಜನ ಏನಾದರೂ ಇದ್ದರೆ ಅದಕ್ಕೆ ಸಮನಾದ ನಗದನ್ನು ಒಳಗೊಂಡು, ಅವನಿಗೆ ಸಂದಾಯ ಮಾಡತಕ್ಕದು.

(2) 27ನೇ ಪ್ರಕರಣದ ಮೇರೆಗೆ ಮೋಟಾರು ಸಾರಿಗೆ ಕೆಲಸಗಾರನಿಗೆ ನಾಲ್ಕು ದಿನಗಳಿಗೆ ಕಡಿಮೆ ಇಲ್ಲದಂತೆ ರಜೆಯನ್ನು ಕೊಟ್ಟಿರುವಲ್ಲಿ, ನಿಯೋಜಕನಿಗೆ ಈ ಬಗ್ಗೆ ಅವನು ಸಲ್ಲಿಸಿದ ಅರ್ಜಿಯ ಮೇರೆಗೆ ಅವನ ರಜೆಯ ಅವಧಿಯ ಬಗ್ಗೆ ಅವನಿಗೆ ಸಂದಾಯವಾಗಬೇಕಾದ ಮಜೂರಿಗಾಗಿ ಸಮನಾದ ಸರಿಸುಮಾರು ಮೊಬಲಗನ್ನು ಅವನ ರಜೆಯು ಪ್ರಾರಂಭವಾಗುವ ಮುಂಚೆ ಮುಂಗಡವಾಗಿ ಅವನಿಗೆ ಸಂದಾಯ ಮಾಡತಕ್ಕದು, ಮತ್ತು ಹಾಗೆ ಸಂದಾಯ ಮಾಡಿದ ಯಾವುದೇ ಮೊಬಲಗನ್ನು ಮೇಲೆ ತಿಳಿಸಿದ ರಜಾ ಅವಧಿಯ ಬಗ್ಗೆ ಅವನಿಗೆ ಸಂದಾಯ ಮಾಡಬೇಕಾಗಿರುವ ಮಜೂರಿಯಲ್ಲಿ ಉತ್ತಾರ ಹಾಕಿಕೊಳ್ಳತಕ್ಕದು.

(3) 27ನೇ ಪ್ರಕರಣದ (3)ನೇ ಉಪ ಪ್ರಕರಣದ ಮೇರೆಗೆ ಮೋಟಾರು ಸಾರಿಗೆ ಕೆಲಸಗಾರನಿಗೆ ಹಕ್ಕಿರುವ ರಜೆಯನ್ನು ಕೊಡದೆ ಇದ್ದರೆ, ಅದಕ್ಕೆ ಬದಲಾಗಿ (1)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ದರಗಳಲ್ಲಿ ಮಜೂರಿಯನ್ನು ಅವನಿಗೆ ಸಂದಾಯಮಾಡತಕ್ಕದು.

## ಅಧ್ಯಾಯ VIII

### ದಂಡಗಳು ಮತ್ತು ಪ್ರಕ್ರಿಯೆ

29. ಅಡ್ಡಿಗಳು.—(1) ಈ ಅಧಿನಿಯಮದ ಮೇರೆಗಿನ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಪರಿಶೀಲಕನಿಗೆ ಅಡ್ಡಿಯನ್ನುಂಟುಮಾಡುವ ಅಥವಾ ಯಾವುದೇ ಮೋಟಾರು ಸಾರಿಗೆ ಉದ್ಯಮಕ್ಕೆ ಸಂಬಂಧಿಸಿ, ಈ ಅಧಿನಿಯಮದಿಂದ ಅಥವಾ ಅದರ ಮೇರೆಗೆ ಅಧಿಕೃತಗೊಳಿಸಲಾದ ಯಾವುದೇ ಪರಿಶೀಲನೆಯನ್ನು, ಪರೀಕ್ಷೆಯನ್ನು ಅಥವಾ ವಿಚಾರಣೆಯನ್ನು ಮಾಡಲು ಯಾವುದೇ ಯುಕ್ತ ಸೌಲಭ್ಯವನ್ನು ಪರಿಶೀಲಕನಿಗೆ ಒದಗಿಸಲು ಇಂಕಾರ ಮಾಡುವ ಅಥವಾ ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸುವ ಯಾವನೇ ವ್ಯಕ್ತಿಯು ಮೂರು ತಿಂಗಳುಗಳವರೆಗಿನ ಕಾರಾವಾಸದಿಂದ ಅಥವಾ ಐದುನೂರು ರೂಪಾಯಿಗಳವರೆಗಿನ ಜುಲ್ಮಾನೆಯಿಂದ, ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದು.

(2) ಈ ಅಧಿನಿಯಮಕ್ಕೆ ಅನುಸಾರವಾಗಿ ಇಡಲಾದ ಯಾವುದೇ ರಿಜಿಸ್ಟರನ್ನು ಅಥವಾ ಇತರ ದಸ್ತಾವೇಜನ್ನು ಪರಿಶೀಲಕನ ಮಾಗಣಿಯ ಮೇರೆಗೆ ಹಾಜರುಪಡಿಸಲು ಉದ್ದೇಶಪೂರ್ವಕವಾಗಿ ಇಂಕಾರ ಮಾಡುವ ಯಾವನೇ ವ್ಯಕ್ತಿಯು, ಅಥವಾ ಈ ಅಧಿನಿಯಮದ ಮೇರೆಗಿನ ತನ್ನ ಕರ್ತವ್ಯಗಳಿಗೆ ಅನುಸಾರವಾಗಿ ಕಾರ್ಯವನ್ನು ನಿರ್ವಹಿಸುತ್ತಿರುವ ಪರಿಶೀಲಕನ ಮುಂದೆ ಯಾವನೇ ವ್ಯಕ್ತಿಯು ಹಾಜರಾಗದಂತೆ ಅಥವಾ ಆ ಪರಿಶೀಲಕನಿಂದ ಪರೀಕ್ಷಿತನಾಗದಂತೆ ಪ್ರತಿಬಂಧಿಸುವ ಅಥವಾ ಪ್ರತಿಬಂಧಿಸಲು ಪ್ರಯತ್ನಿಸುವ ಅಥವಾ ಆ ವ್ಯಕ್ತಿಯನ್ನು ಪ್ರತಿಬಂಧಿಸುವ ಸಂಭವವಿದೆಯೆಂದು ತಾನು ನಂಬಲು ಕಾರಣವಿರುವಂಥ ಯಾವುದೇ ಕೃತ್ಯವನ್ನು ಮಾಡುವ ಯಾವನೇ ವ್ಯಕ್ತಿಯು, ಮೂರು ತಿಂಗಳುಗಳವರೆಗಿನ ಕಾರಾವಾಸದಿಂದ ಅಥವಾ ಐದುನೂರು ರೂಪಾಯಿಗಳವರೆಗಿನ ಜುಲ್ಮಾನೆಯಿಂದ, ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದು.

30. ಸುಳ್ಳು ಧಾರ್ಢ್ಯ ಪ್ರಮಾಣಪತ್ರದ ಉಪಯೋಗ.—23ನೇ ಪ್ರಕರಣದಮೇರೆಗೆ ಇನ್ನೊಬ್ಬ ವ್ಯಕ್ತಿಗೆ ಕೊಟ್ಟ ಪ್ರಮಾಣ ಪತ್ರವನ್ನು ಆ ಪ್ರಕರಣದ ಮೇರೆಗೆ ತನಗೆ ಕೊಟ್ಟ ದಾರ್ಢ್ಯ ಪ್ರಮಾಣಪತ್ರದಂತೆ ತಿಳಿದೂ ಉಪಯೋಗಿಸುವ ಅಥವಾ ಉಪಯೋಗಿಸಲು ಪ್ರಯತ್ನಿಸುವ, ಅಥವಾ ತನಗೆ ಕೊಟ್ಟ ದಾರ್ಢ್ಯ ಪ್ರಮಾಣಪತ್ರವನ್ನು ಇನ್ನೊಬ್ಬ ವ್ಯಕ್ತಿಯು ಉಪಯೋಗಿಸುವುದಕ್ಕೆ ತಿಳಿದೂ ಅವಕಾಶ ಕೊಡುವ ಅಥವಾ ಅದನ್ನು ಉಪಯೋಗಿಸಿಕೊಳ್ಳಲು ಪ್ರಯತ್ನ ಮಾಡುವುದಕ್ಕೆ ಅವಕಾಶ ಕೊಡುವ ಯಾವನೇ ವ್ಯಕ್ತಿಯು, ಒಂದು ತಿಂಗಳವರೆಗಿನ ಕಾರಾವಾಸದಿಂದ, ಅಥವಾ ಐವತ್ತು ರೂಪಾಯಿಗಳ ವರೆಗಿನ ಜುಲ್ಮಾನೆಯಿಂದ, ಅಥವಾ ಅವೆರಡರಿಂದಲೂ, ದಂಡನೀಯನಾಗತಕ್ಕುದು.

31. ಮೋಟಾರು ಸಾರಿಗೆ ಕೆಲಸಗಾರರ ನಿಯೋಜನೆಯ ಬಗೆಗಿನ ಉಪಬಂಧಗಳ ಉಲ್ಲಂಘನೆ.—ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅನ್ಯಥಾ ಅನುಮತಿಸಲಾದಂತೆ ಹೊರತು, ಮೋಟಾರು ಸಾರಿಗೆ ಉದ್ಯಮದಲ್ಲಿನ ವ್ಯಕ್ತಿಗಳ ನಿಯೋಜನೆಯನ್ನು, ನಿಷೇಧಿಸುವ, ನಿರ್ಬಂಧಿಸುವ ಅಥವಾ ವಿನಿಯಮನಗೊಳಿಸುವ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುವೇ ನಿಯಮಗಳ ಯಾವುದೇ ಉಪಬಂಧವನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು, ಮೂರು ತಿಂಗಳುಗಳವರೆಗಿನ ಕಾರಾವಾಸದಿಂದ, ಅಥವಾ ಐದುನೂರು ರೂಪಾಯಿಗಳವರೆಗಿನ ಜುಲ್ಮಾನೆಯಿಂದ, ಅಥವಾ ಅವೆರಡರಿಂದಲೂ, ಮತ್ತು ಮುಂದುವರಿಯುತ್ತಿರುವ ಉಲ್ಲಂಘನೆಯ ಸಂದರ್ಭದಲ್ಲಿ, ಅಂಥ ಪ್ರಥಮ ಉಲ್ಲಂಘನೆಗಾಗಿ ಅಪರಾಧಿಯೆಂದು ನಿರ್ಣಯವಾದ ಅನಂತರ ಅಂಥ ಉಲ್ಲಂಘನೆಯು ಮುಂದುವರಿಯುವ ಪ್ರತಿಯೊಂದು ದಿನಕ್ಕೆ ಎಪ್ಪತ್ತೈದು ರೂಪಾಯಿಗಳವರೆಗಿನ ಹೆಚ್ಚಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

32. ಇತರ ಅಪರಾಧಗಳು.—ಈ ಅಧಿನಿಯಮದ ಮೇರೆಗೆ ನಿರ್ದೇಶವನ್ನು ಕೊಡಲು ಅಧಿಕಾರ ಪಡೆದ ಯಾವನೇ ವ್ಯಕ್ತಿಯು ಅಥವಾ ಪ್ರಾಧಿಕಾರವು ಕಾನೂನುಬದ್ಧವಾಗಿ ಕೊಟ್ಟ ಯಾವುದೇ ನಿರ್ದೇಶವನ್ನು ಉದ್ದೇಶಪೂರ್ವಕವಾಗಿ ಪಾಲಿಸದಿರುವ, ಅಥವಾ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುವೇ ನಿಯಮಗಳ ಯಾವ ಉಪಬಂಧಗಳ ಉಲ್ಲಂಘನೆಯ ಬಗ್ಗೆ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಇತರ ಯಾವುದೇ ದಂಡವನ್ನು ಬೇರೆಲ್ಲಿಯೂ ಉಪಬಂಧಿಸಿಲ್ಲವೋ ಆ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು, ಮೂರು ತಿಂಗಳುಗಳವರೆಗಿನ ಕಾರಾವಾಸದಿಂದ ಅಥವಾ ಐದುನೂರು ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

33. ಹಿಂದಿನ ಅಪರಾಧ ನಿರ್ಣಯದ ಅನಂತರ ಹೆಚ್ಚಿಸಿದ ದಂಡ.—ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಬಗ್ಗೆ ಅಪರಾಧಿಯೆಂದು ನಿರ್ಣೀತವಾಗಿರುವ ವ್ಯಕ್ತಿಯು ಅದೇ ಉಪಬಂಧದ ಉಲ್ಲಂಘನೆಯನ್ನು ಒಳಗೊಂಡಿರುವ ಅಪರಾಧಕ್ಕಾಗಿ ಪುನಃ ತಪ್ಪಿತಸ್ಥನಾದರೆ ತರುವಾಯದ ಅಪರಾಧ ನಿರ್ಣಯದ ಬಗ್ಗೆ ಅವನು ಆರು ತಿಂಗಳವರೆಗಿನ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು:

ಪರಂತು, ಈ ಪ್ರಕರಣದ ಉದ್ದೇಶಗಳಿಗಾಗಿ, ಯಾವ ಅಪರಾಧದ ಬಗ್ಗೆ ದಂಡನೆಯನ್ನು ವಿಧಿಸಲಾಗುತ್ತಿದೆಯೋ ಆ ಅಪರಾಧವು ನಡೆದ ಎರಡು ವರ್ಷಗಳ ಹಿಂದೆ ಮಾಡಿದ ಅಪರಾಧ ನಿರ್ಣಯದ ಯಾವುದೇ ಸಂಜ್ಞಾನವನ್ನು ತೆಗೆದುಕೊಳ್ಳತಕ್ಕುದಲ್ಲ.

34. ಕಂಪೆನಿಗಳಿಂದ ಅಪರಾಧಗಳು.—(1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಮಾಡುವ ವ್ಯಕ್ತಿಯು ಕಂಪೆನಿಯಾಗಿದ್ದರೆ, ಆ ಕಂಪೆನಿಯನ್ನು ಮತ್ತು ಆ ಅಪರಾಧವು ನಡೆದ ಕಾಲದಲ್ಲಿ ಆ ಕಂಪೆನಿಯ ವ್ಯವಹಾರಗಳನ್ನು ನಡೆಸುವುದಕ್ಕಾಗಿ ಅದರ ಆಡಳಿತವನ್ನು ಹೊಂದಿದ್ದ, ಮತ್ತು ಅದಕ್ಕೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಆ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕುದು ಮತ್ತು ತದನುಸಾರವಾಗಿ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕುದು.

ಪರಂತು, ಈ ಉಪ-ಪ್ರಕರಣದಲ್ಲಿರುವುದು ಯಾವುದೂ, ಆ ಅಪರಾಧವು ತನಗೆ ತಿಳಿಯದೆಯೇ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ಪ್ರತಿಬಂಧಿಸಲು ಯುಕ್ತವಾದ ಎಲ್ಲ ಜಾಗರೂಕತೆಯನ್ನು ವಹಿಸಿದ್ದೆನೆಂದು ಯಾವನೇ ವ್ಯಕ್ತಿಯು ರುಜುವಾತು ಪಡಿಸಿದರೆ, ಅವನನ್ನು ದಂಡನೆಗೆ ಗುರಿಪಡಿಸತಕ್ಕುದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವು ಕಂಪೆನಿಯಿಂದ ನಡೆದಿರುವಲ್ಲಿ ಮತ್ತು ಕಂಪೆನಿಯ ಯಾವನೇ ನಿರ್ದೇಶಕನ, ವ್ಯವಸ್ಥಾಪಕನ, ವ್ಯವಸ್ಥಾಪಕ ಏಜೆಂಟನ, ಅಥವಾ ಇತರ ಯಾವನೇ ಅಧಿಕಾರಿಯ ಸಮ್ಮತಿಯಿಂದ ಇಲ್ಲವೇ ಪರೋಕ್ಷ ಸಮ್ಮತಿಯಿಂದ ಆ ಅಪರಾಧವು ನಡೆಯಿತೆಂದು ರುಜುವಾತಾದಲ್ಲಿ, ಅಥವಾ ಅದು ಅವನ ಯಾವುದೇ ನಿರ್ಲಕ್ಷತೆಯ ಕಾರಣದಿಂದ ಸಂಭವಿಸಿತೆಂದು ಹೇಳಬಹುದಾಗಿರುವಲ್ಲಿ, ಅಂಥ ನಿರ್ದೇಶಕನು, ವ್ಯವಸ್ಥಾಪಕನು, ವ್ಯವಸ್ಥಾಪಕ ಏಜೆಂಟನು ಅಥವಾ ಅಂಥ ಇತರ ಯಾವನೇ ಅಧಿಕಾರಿಯು ಸಹ ಆ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕುದು ಮತ್ತು ತದನುಸಾರವಾಗಿ ಅವನು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕುದು

ವಿವರಣೆ.—ಈ ಪ್ರಕರಣದ ಉದ್ದೇಶಗಳಿಗಾಗಿ,—

(ಕ) "ಕಂಪೆನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಖ) ಒಂದು ಫರ್ಮಿನ ಸಂಬಂಧದಲ್ಲಿ "ನಿರ್ದೇಶಕ" ಎಂದರೆ, ಫರ್ಮಿನ ಪಾಲುದಾರ.

35. ಅಪರಾಧಗಳ ಸಂಜ್ಞಾನ.—ಪರಿಶೀಲಕನು ಕೊಟ್ಟಿರುವ ಅಥವಾ ಅವನು ಬರಹ ಮೂಲಕ ಕೊಟ್ಟ ಪೂರ್ವ ಮಂಜೂರಾತಿಯೊಂದಿಗೆ, ಕೊಟ್ಟಿರುವ ಫಿರ್ಯಾದಿನ ಮೇಲೆ ಹೊರತು, ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ನ್ಯಾಯಾಲಯವು, ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕುದಲ್ಲ ಮತ್ತು ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟನ ಅಥವಾ ಪ್ರಥಮ ದರ್ಜೆಯ ಮ್ಯಾಜಿಸ್ಟ್ರೇಟ್‌ನ ನ್ಯಾಯಾಲಯದ ದರ್ಜೆಗೆ ಕಡಿಮೆಯಿಲ್ಲದ ಯಾವ ನ್ಯಾಯಾಲಯವೂ ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಅಧಿವಿಚಾರಣೆಯನ್ನು ಮಾಡತಕ್ಕುದಲ್ಲ.

36. ಪ್ರಾಸಿಕ್ಯೂಷನ್ನುಗಳ ಪರಿಮಿತಿ.—ಆಪಾದಿಸಲಾದ ಅಪರಾಧವು ನಡೆಯಿತೆಂದು ಪರಿಶೀಲಕನಿಗೆ ತಿಳಿದುಬಂದ ದಿನಾಂಕದಿಂದ ಮೂರು ತಿಂಗಳೊಳಗೆ ಅವನು ಅದರ ಬಗ್ಗೆ ಫಿರ್ಯಾದನ್ನು ಮಾಡಿದ ಹೊರತು, ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕುದಲ್ಲ:

ಪರಂತು, ಪರಿಶೀಲಕನು ಬರಹ ಮೂಲಕ ಕೊಟ್ಟ ಆದೇಶವನ್ನು ಪಾಲಿಸದಿರುವುದನ್ನು ಅಪರಾಧವು ಒಳಗೊಂಡಿರುವಲ್ಲಿ, ಆ ಅಪರಾಧವು ನಡೆಯಿತೆಂದು ಹೇಳಲಾದ ದಿನಾಂಕದಿಂದ ಆರು ತಿಂಗಳೊಳಗಾಗಿ ಅದರ ಬಗ್ಗೆ ಫಿರ್ಯಾದನ್ನು ಮಾಡಬಹುದು.

## ಅಧ್ಯಾಯ—IX

### ಸಂಕೀರ್ಣ

37. ಈ ಅಧಿನಿಯಮಕ್ಕೆ ಅಸಂಗತವಾದ ಕಾನೂನುಗಳ ಮತ್ತು ಒಪ್ಪಂದಗಳ ಪರಿಣಾಮ.—(1) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆಯಾಗಲಿ ಅಥವಾ ಅನಂತರದಲ್ಲಿಯಾಗಲಿ ರಚಿಸಿದ ಯಾವುದೇ ಇತರ ಕಾನೂನಿನಲ್ಲಿ ಅಥವಾ ಯಾವುದೇ ಐತೀರ್ಪಿನ, ಒಪ್ಪಂದದ ಅಥವಾ ಸೇವಾ ಕರಾರಿನ ನಿಬಂಧನೆಗಳಲ್ಲಿ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾದುದು ಏನೇ ಇದ್ದರೂ, ಆ ಉಪಬಂಧಗಳು ಪರಿಣಾಮಕಾರಿಯಾಗಿರತಕ್ಕುದು :

ಪರಂತು, ಅಂಥ ಯಾವುದೇ ಐತೀರ್ಪಿನ, ಒಪ್ಪಂದದ, ಸೇವಾ ಕರಾರಿನ ಮೇರೆಗೆ ಅಥವಾ ಅನ್ಯಥಾ, ಮೋಟಾರು ಸಾರಿಗೆ ಕೆಲಸಗಾರನಿಗೆ, ಯಾವುದೇ ವಿಷಯದಲ್ಲಿ ಈ ಅಧಿನಿಯಮದ ಮೇರೆಗೆ ಅವನಿಗೆ ಹಕ್ಕಿದ್ದಿರಬಹುದಾದ ಪ್ರಯೋಜನಗಳಿಗಿಂತ ಅವನಿಗೆ ಹೆಚ್ಚು ಅನುಕೂಲಕರವಾದ ಪ್ರಯೋಜನಗಳನ್ನು ಪಡೆಯಲು ಹಕ್ಕಿರುವಲ್ಲಿ, ಮೋಟಾರು ಸಾರಿಗೆ ಕೆಲಸಗಾರನು, ಇತರ ವಿಷಯಗಳ ಸಂಬಂಧದಲ್ಲಿ ಈ ಅಧಿನಿಯಮದ ಮೇರೆಗೆ ಪ್ರಯೋಜನಗಳನ್ನು ಪಡೆಯುತ್ತಿದ್ದಾಗ್ಯೂ ಆ ವಿಷಯದಲ್ಲಿ ಆ ಹೆಚ್ಚು ಅನುಕೂಲಕರವಾದ ಪ್ರಯೋಜನಗಳನ್ನು ಪಡೆಯಲು ಹಕ್ಕುಳ್ಳವನಾಗಿರುವುದು ಮುಂದುವರಿಯತಕ್ಕುದು.

(2) ಈ ಅಧಿನಿಯಮದಲ್ಲಿ ಇರುವುದು ಯಾವುದೂ, ಯಾವನೇ ಮೋಟಾರು ಕೆಲಸಗಾರನಿಗೆ ಯಾವುದೇ ವಿಷಯದಲ್ಲಿ ಈ ಅಧಿನಿಯಮದ ಮೇರೆಗೆ ಹಕ್ಕಿದ್ದಿರಬಹುದಾದವುಗಳಿಗಿಂತಲೂ ಹೆಚ್ಚು ಅನುಕೂಲಕರವಾದ ಹಕ್ಕುಗಳನ್ನು ಮತ್ತು ವಿಶೇಷ ಹಕ್ಕುಗಳನ್ನು ತನಗೆ ಕೊಡುವ ಬಗ್ಗೆ ನಿಯೋಜಕನೊಂದಿಗೆ ಒಪ್ಪಂದ ಮಾಡಿಕೊಳ್ಳುವುದಕ್ಕೆ ಆ ಕೆಲಸಗಾರನನ್ನು ಪ್ರತಿವಾರಿಸುವುದೆಂದು ಅರ್ಥೈಸತಕ್ಕುದಲ್ಲ.

38. ವಿನಾಯಿತಿಗಳು.—(1) ಈ ಅಧಿನಿಯಮದಲ್ಲಿ ಅಡಕವಾಗಿರುವುದು ಯಾವುದೂ,—

(i) ಕಾಯಿಲೆಯ ಅಥವಾ ಗಾಯಗೊಂಡ ವ್ಯಕ್ತಿಗಳ ಸಾಗಣೆಗಾಗಿ ಉಪಯೋಗಿಸಲಾದ ;

(ii) ಭಾರತದ ಭದ್ರತೆಗೆ ಅಥವಾ ರಾಜ್ಯದ ಭದ್ರತೆಗೆ ಅಥವಾ ಸಾರ್ವಜನಿಕ ಸುವ್ಯವಸ್ಥೆಯ ಪಾಲನೆಗೆ ಸಂಬಂಧಿಸಿದ ಯಾವುದೇ ಉದ್ದೇಶಕ್ಕಾಗಿ ಉಪಯೋಗಿಸಲಾದ ; ಯಾವುದೇ ಸಾರಿಗೆ ವಾಹನಕ್ಕೆ ಅಥವಾ ಅದಕ್ಕೆ ಸಂಬಂಧಿಸಿ ಅನ್ವಯಿಸತಕ್ಕುದಲ್ಲ.

(2) (1)ನೇ ಉಪ-ಪ್ರಕರಣದ ಉಪಬಂಧಗಳಿಗೆ ಪ್ರತಿಕೂಲವಾಗದಂತೆ, ರಾಜ್ಯ ಸರ್ಕಾರವು, ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಮತ್ತು ನಿರ್ಬಂಧಗಳೇನಾದರೂ ಇದ್ದರೆ ಅವುಗಳಿಗೆ ಒಳಪಟ್ಟು, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳ ಉಪಬಂಧಗಳು,—

(i) ಯಾವುದೇ ಮೋಟಾರು ಸಾರಿಗೆ ಉದ್ಯಮದಲ್ಲಿ ಮೇಲ್ವಿಚಾರಣೆಯ ಅಥವಾ ವ್ಯವಸ್ಥಾಪನೆಯ ಸ್ಥಾನ ಹೊಂದಿದ್ದಾನೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಡುವ ಯಾರೇ ಮೋಟಾರು ಸಾರಿಗೆ ಕೆಲಸಗಾರರಿಗೆ ;

(ii) ಯಾವನೇ ಅಂಶಕಾಲಿಕ ಮೋಟಾರು ಸಾರಿಗೆ ಕೆಲಸಗಾರನಿಗೆ ; ಮತ್ತು

(iii) ನಿಯೋಜಕರ ಯಾವುದೇ ವರ್ಗಕ್ಕೆ ;

—ಅನ್ವಯಿಸತಕ್ಕುದಲ್ಲವೆಂದು ನಿರ್ದೇಶಿಸಬಹುದು ;

ಪರಂತು, ಈ ಉಪಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಹೊರಡಿಸುವ ಮುಂಚೆ, ರಾಜ್ಯ ಸರ್ಕಾರವು ಅದರ ಒಂದು ಪ್ರತಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕುದು;

39. ನಿರ್ದೇಶಗಳನ್ನು ಕೊಡುವ ಅಧಿಕಾರಗಳು.—ಕೇಂದ್ರಸರ್ಕಾರವು ಯಾವುದೇ ರಾಜ್ಯ ಸರ್ಕಾರಕ್ಕೆ, ಈ ಅಧಿನಿಯಮದಲ್ಲಿ ಇರುವ ಉಪಬಂಧಗಳನ್ನು ಆ ರಾಜ್ಯದಲ್ಲಿ ಕಾರ್ಯಗತಗೊಳಿಸುವ ಬಗ್ಗೆ ನಿರ್ದೇಶಗಳನ್ನು ಕೊಡಬಹುದು.

40. ನಿಯಮ ರಚನಾಧಿಕಾರ.—(1) ರಾಜ್ಯ ಸರ್ಕಾರವು, ಪೂರ್ವ ಪ್ರಕಟಣೆಯ ಷರತ್ತಿಗೆ ಒಳಪಟ್ಟು, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು :

ಪರಂತು, ಸಾಮಾನ್ಯ ಖಂಡಗಳ ಅಧಿನಿಯಮ, 1897ರ 23ನೇ ಪ್ರಕರಣದ (3)ನೇ ಖಂಡದ ಮೇರೆಗೆ ನಿರ್ದಿಷ್ಟಪಡಿಸಬೇಕಾದ ದಿನಾಂಕವು, ಉದ್ದೇಶಿತ ನಿಯಮಗಳ ಕರಡನ್ನು ಪ್ರಕಟಿಸಿದ ದಿನಾಂಕದಿಂದ ಆರು ವಾರಗಳಿಗೆ ಕಡಿಮೆ ಇಲ್ಲದಂತೆ ಇರತಕ್ಕುದು.

(2) ವಿಶೇಷವಾಗಿ, ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ಯಾವುವೇ ನಿಯಮಗಳು,—

(ಕ) ಮೋಟಾರು ಸಾರಿಗೆ ಉದ್ಯಮದ ನೋಂದಣಿಯ ಬಗೆಗಿನ ಅರ್ಜಿಯ ನಮೂನೆ, ಅಂಥ ಅರ್ಜಿಯನ್ನು ಯಾವ ಕಾಲದೊಳಗೆ ಮತ್ತು ಯಾವ ಪ್ರಾಧಿಕಾರಕ್ಕೆ ಮಾಡಿಕೊಳ್ಳಬಹುದು;

(ಖ) ಮೋಟಾರು ಸಾರಿಗೆ ಉದ್ಯಮಕ್ಕೆ ಸಂಬಂಧಿಸಿ ನೋಂದಣಿಯ ಪ್ರಮಾಣ ಪತ್ರವನ್ನು ಕೊಡುವುದು, ಮತ್ತು ಅಂಥ ನೋಂದಣಿಯ ಬಗ್ಗೆ ಸಂದಾಯ ಮಾಡಬೇಕಾದ ಫೀಸು;

(ಗ) ಮುಖ್ಯ ಪರಿಶೀಲಕನಿಗೆ ಮತ್ತು ಪರಿಶೀಲಕನಿಗೆ ಸಂಬಂಧಿಸಿ ಅಗತ್ಯಪಡಿಸಲಾದ ಅರ್ಹತೆಗಳು ;

(ಘ) ಪರಿಶೀಲಕರು ಚಲಾಯಿಸಬಹುದಾದ ಅಧಿಕಾರಗಳು ಮತ್ತು ಅಂಥ ಅಧಿಕಾರಗಳನ್ನು ಚಲಾಯಿಸಬಹುದಾದ ರೀತಿ ;

(ಙ) ಪ್ರಮಾಣೀಕರಿಸುವ ಶಸ್ತ್ರ ವೈದ್ಯರು ನಡೆಸಬಹುದಾದ ವೈದ್ಯಕೀಯ ಮೇಲ್ವಿಚಾರಣೆ ;

(ಚ) ಮುಖ್ಯ ಪರಿಶೀಲಕನ ಅಥವಾ ಪರಿಶೀಲಕನ ಯಾವುದೇ ಆದೇಶದ ಮೇಲಿನ ಅಪೀಲುಗಳು ಮತ್ತು ಅಂಥ ಅಪೀಲುಗಳನ್ನು ಯಾವ ನಮೂನೆಯಲ್ಲಿ ಯಾವ ಕಾಲದೊಳಗೆ ಮತ್ತು ಯಾವ ಪ್ರಾಧಿಕಾರಗಳಿಗೆ ಸಲ್ಲಿಸಬಹುದೋ ಆ ನಮೂನೆ, ಕಾಲ ಮತ್ತು ಪ್ರಾಧಿಕಾರಗಳು ;

(ಛ) ಈ ಅಧಿನಿಯಮವು ಒದಗಿಸಬೇಕೆಂದು ಮತ್ತು ನಿರ್ವಹಿಸಬೇಕೆಂದು ಅಗತ್ಯಪಡಿಸಿರುವ ಸೌಲಭ್ಯಗಳನ್ನು ಯಾವ ಕಾಲದೊಳಗೆ ಹಾಗೆ ಒದಗಿಸಬೇಕು ;

(ಜ) ಮೋಟಾರು ಸಾರಿಗೆ ಕೆಲಸಗಾರರಿಗೆ ಒದಗಿಸಬೇಕಾದ ವೈದ್ಯಕೀಯ ಸೌಲಭ್ಯಗಳು ;

(ಝ) ಪ್ರಥಮ ಚಿಕಿತ್ಸಾ ಪೆಟ್ಟಿಗೆಯಲ್ಲಿ ಒದಗಿಸಬೇಕಾದ ಸಾಧನ ಸಾಮಗ್ರಿಗಳ ಮಾದರಿ ;

(ಞ) ದೂರದ ಮಾರ್ಗಗಳನ್ನು, ಹಬ್ಬದ ಮತ್ತು ಇತರ ಸಂದರ್ಭಗಳನ್ನು ನಿಯಮಿಸಲಾದ ಪ್ರಾಧಿಕಾರವು ಅಧಿಸೂಚಿಸಬಹುದಾದ ರೀತಿ ;

(ಟ) 13ನೇ ಪ್ರಕರಣದ ಎರಡನೇ ಪರಂತುಕದಲ್ಲಿ ಉಲ್ಲೇಖಿಸಲಾಗಿರುವ ಯಾವುದೇ ಸಂದರ್ಭದಲ್ಲಿ, ಯಾವುದೇ ಒಂದು ದಿನದಲ್ಲಿ ಎಂಟು ಗಂಟೆಗಳಿಗಿಂತ ಹೆಚ್ಚಿಗೆ ಅಥವಾ ಯಾವುದೇ ಒಂದು ವಾರದಲ್ಲಿ ನಲವತ್ತೆಂಟು ಗಂಟೆಗಳಿಗಿಂತ ಹೆಚ್ಚಿಗೆ ಕೆಲಸ ಮಾಡಲು ಯಾವನೇ ಮೋಟಾರು ಸಾರಿಗೆ ಕೆಲಸಗಾರನನ್ನು ಯಾವ ಷರತ್ತುಗಳಿಗೆ ಮತ್ತು ಪರಿಮಿತಿಗಳಿಗೆ ಒಳಪಟ್ಟು ಅಗತ್ಯಪಡಿಸಬಹುದೋ ಅಥವಾ ಅನುಮತಿಸಬಹುದೋ, ಆ ಯಾವುವೇ ಷರತ್ತುಗಳು ಮತ್ತು ಪರಿಮಿತಿಗಳು ;

(ಠ) ಕೆಲಸದ ವೇಳೆಯ ನೋಟೀಸುಗಳನ್ನು ಪ್ರದರ್ಶಿಸಬೇಕಾದ ಮತ್ತು ಇಟ್ಟುಕೊಂಡು ಬರಬೇಕಾದ ನಮೂನೆ ಮತ್ತು ರೀತಿ ;

(ಡ) 13ನೇ ಪ್ರಕರಣದ ಎರಡನೆಯ ಪರಂತುಕದಲ್ಲಿ ಉಲ್ಲೇಖಿಸಲಾಗಿರುವ ಯಾವುದೇ ಸಂದರ್ಭದಲ್ಲಿ, ಮೋಟಾರು ಸಾರಿಗೆ ಕೆಲಸಗಾರನು ಮಾಡಿದ ಅಧಿಕ ಕಾಲಿಕ ಕೆಲಸಕ್ಕೆ ಸಂಬಂಧಿಸಿದ ಹೆಚ್ಚಿನ ಮಂಜೂರಿಯ ದರಗಳು ;

(ಢ) ನಿಯೋಜಕನು ಇಟ್ಟುಕೊಂಡು ಬರಬೇಕಾದ ರಿಜಿಸ್ಟರುಗಳು ಮತ್ತು ಈ ಅಧಿನಿಯಮದ ಉದ್ದೇಶಗಳಿಗಾಗಿ ಅಗತ್ಯವಾಗಬಹುದೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಡುವ ಸಾಂದರ್ಭಿಕ ಅಥವಾ ನಿಯತಕಾಲಿಕ ವಿವರಪಟ್ಟಿಕೆಗಳು ಮತ್ತು

(ಣ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಇತರ ಯಾವುದೇ ವಿಷಯ ;

—ಇವುಗಳ ಬಗ್ಗೆ ಉಪಬಂಧಿಸಬಹುದು.

The above translation in Kannada of the Motor Transport Workers Act, 1961 (27 of 1961) has been authorised by the President to be published in the Official Gazette under Section 2 of the Authorised Translations (Central Laws) Act, 1973.

R. V. S. PERI SASTRI
Secretary to Govt. of India.